
ಪಿ. ಧೂಲಾ ಸಾಹೇಬ

ವ್ಯಕ್ತಿ ಪರಿಚಯ



ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

ಕಾ.ಹು. ಬಿಜಾಪುರ

ಜನಪ್ರಿಯ ಜಾನಪದ ಪುಸ್ತಕ ಮಾಲೆ - ೧೨

ಪಿ. ಧೂಲಾಸಾಹೇಬ

ವ್ಯಕ್ತಿ ಪರಿಚಯ

ಕಾ. ಹು. ಬಿಜಾಪುರ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಲೇಔಟ್,
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು - 560 054

P. DHULA SAHEBA -
A pen portrait - by KA.HU. BIJAPURA.
Published by : KARNATAKA JANAPADA PARISHATH.
No.1, Jaladarshini Layout, Near M.S. Ramaiah Hospital Gate,
New B.E.L. Road, Bangalore - 560 054.
Pages : 32 Price : Rs.10 2008.

ಪ್ರಥಮ ಮುದ್ರಣ : ೨೦೦೮
ಪ್ರತಿಗಳು : ೨೦೦೦
ಪುಟಗಳು : ೩೨
ಬೆಲೆ : ರೂ. ೧೦ (ಹತ್ತು ರೂಪಾಯಿ)

ಮುದ್ರಕರು : ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆಯೂ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜನಪ್ರಿಯ ಜಾನಪದ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಶ್ರೀ ಕಾ.ಹು. ಬಿಜಾಪುರ** ಅವರು **ಪಿ. ಧೂಲಾಸಾಹೇಬ** ರವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೦೧-೦೨-೨೦೦೮

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಪಿ. ಧೂಲಾಸಾಹೇಬ

"ಪಿ. ಧೂಲಾ ಅವರು ಜನಸಿದ್ದು 1901ರಲ್ಲಿ. ಇವರು ಮಧುರ ಚೆನ್ನರಿಗಿಂತ ಎರಡು ವರುಷ ಹಿರಿಯರು. ಪಿ. ಧೂಲಾ ಸಾಹೇಬ ಎಂದರೆ, ಪಟೇಲ (ಪಾಟೀಲ) ಧೂಲಾ ಸಾಹೇಬ. ಪಟೇಲ ಎಂಬುದು ಅವರ ಮನೆತನದ ಹೆಸರು. ಆದಿಲ್ ಶಾಹಿಯ ಕಾಲದಿಂದ ಹಲಸಂಗಿಯ ಗೌಡರಾದ ಇವರು ಪಟೇಲ ಎನಿಸುವುದು ಸಹಜ. ಧೂಲಾ ಸಾಹೇಬ ಎಂಬುದು ಅವರ ನಿಜವಾದ ಹೆಸರಲ್ಲ. ಅದೊಂದು ಪ್ರೀತಿಯ ಹೆಸರು. ಅವರ ನಿಜವಾದ ಹೆಸರು ಕಾಸೀಮ ಸಾಹೇಬ. ಇವರ ತಂದೆಯ ಹೆಸರು ಹುಸೇನ ಖಾನ. ತಾಯಿಯ ಹೆಸರು ಚಾಂದಬೀಬಿ. ಧೂಲಾ ಎಂದೇ ಪ್ರಸಿದ್ಧರಾದ ಅವರಿಗೆ ಆ ಹೆಸರು ಅನ್ವರ್ಥಕವಾದುದೇನೂ ಅಲ್ಲ. 'ಧೂಲ್ಹಾ' ಎಂದರೆ, ಫಾರ್ಸಿ ಭಾಷೆಯಲ್ಲಿ 'ಮದುವಣಿಗ' ಎಂದು ಅರ್ಥ. ಆದರೆ ಈ ಧೂಲಾ ಸಾಹೇಬರು ಆಜನ್ಮ ಬ್ರಹ್ಮಚಾರಿಗಳು" ಎಂದು ಡಾ.ಜಿ. ಎನ್. ಕಾಪಸೆಯವರು ದಾಖಲಿಸಿದ್ದಾರೆ. ಬ್ರಿಟಿಷ್ ಸರಕಾರ ಈ ಮನೆತನಕ್ಕೆ ಹತ್ತು ಸರ್ವೆ ನಂಬರಗಳನ್ನು ದತ್ತಿಯಾಗಿ ನೀಡಿತ್ತು. ಇವರದು ಹದಿನಾರು ಆಣೆ ಗೌಡರ ಮನೆತನ. ಹಲಸಂಗಿ ಮತ್ತು ನಂದ್ರಾಳ ಗ್ರಾಮಗಳು ಈ ಗೌಡರ ಮನೆತನಕ್ಕೆ ಒಳಪಟ್ಟಿದವು.

ವಿದ್ಯಾಭ್ಯಾಸ : "ಧೂಲಾಸಾಹೇಬರು ಶಾಲೆಯಲ್ಲಿ ಓದಿದ್ದು ಮೂರನೇ ಇಯತ್ತೆವರೆಗೆ. ಪಾಸಾದದ್ದು ಮುಲಕೀ ಪರೀಕ್ಷೆ. ಅದಕ್ಕೆ ಮಧುರ ಚೆನ್ನರ ಗೆಳೆತನವೇ ಕಾರಣ.

"ಪಿ.ಧೂಲಾ ಮುಲ್ಕೀ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಬಳಿಕ ಮುಂದೆ ವಿದ್ಯಾಭ್ಯಾಸವನ್ನು ಸಾಗಿಸಲು ಅನುಕೂಲವಾಗದೇ ಮಧುರ ಚೆನ್ನರ ಮಾರ್ಗಾನುಯಾಯಿಗಳಾದ ವಿಜಾಪೂರದ ಶ್ರೀ ಕೊಣ್ಣೂರ ಹನುಮಂತರಾಯರ ಬಳಿಯಲ್ಲಿ ಇಂಗ್ಲಿಷ್ ಹೇಳಿಸಿಕೊಳ್ಳತೊಡಗಿದನು... ಎದೆಯ ಮೇಲಿನ ಎರಡೂ ಕಿಸೆಗಳಲ್ಲಿ ಪುಸ್ತಕ ದಿನಚರಿಗಳು ಅಡಗಿಕೊಂಡಿರುತ್ತಿದ್ದವು. ಆತನು ತನ್ನ ಊಟದ ವ್ಯವಸ್ಥೆ ಮಾಡಿಕೊಂಡು ಕೊಣ್ಣೂರವರಲ್ಲಿ ಪಾಠ ಹೇಳಿಸಿಕೊಳ್ಳುತ್ತಿದ್ದನು. ಆದರೆ ಊಟದ ವ್ಯವಸ್ಥೆಗೆ ಹಣವೆಲ್ಲಿಂದ ತರುತ್ತಿದ್ದನು! ಆತನು ವಿಜಾಪೂರದಲ್ಲಿ ಇಬ್ಬರು ವಿದ್ಯಾರ್ಥಿಗಳಿಗೆ ದಿನಾಲು ಸಂಜೆ ಪಾಠಹೇಳುವ ಕೆಲಸ ವಹಿಸಿಕೊಂಡಿದ್ದನು. ಕೊಣ್ಣೂರವರಲ್ಲಿ ತಾನು ಹೇಳಿಸಿಕೊಂಡುಬಂದ ಪಾಠಗಳನ್ನೇ ಆ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದನು. ಆ ಏರ್ಪಾಡಿನಿಂದ ಬರುವ ಹಣದಿಂದ ಒಂದು ಅಗ್ಗದ ಖಾನಾವಳಿಯಲ್ಲಿ ಊಟ ಮಾಡುತ್ತಿದ್ದನು" ಎಂದಿದ್ದಾರೆ ಸಿಂಪಿ ಲಿಂಗಣ್ಣನವರು.

ಮಧುರಚೆನ್ನರು ಗೆಳೆಯರ ಬಳಗವನ್ನು ಕಟ್ಟಿಕೊಂಡು ತಾವೂ ಬೆಳೆದರು. ತಮ್ಮೊಂದಿಗೆ ಗೆಳೆಯರನ್ನೂ ಬೆಳೆಸಿದರು. ಅಂಥವರಲ್ಲಿ ಪಿ. ಧೂಲಾಸಾಹೇಬರೂ ಒಬ್ಬರು.

ಮಧುರ ಚೆನ್ನರ ಸಮ-ಸಮಾಯಿಕವಾಗಿಯೇ ಧೂಲಾ ಸಾಹೇಬರು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದರು. ಹಲಸಂಗಿ ಗೆಳೆಯರು ಪ್ರಾರಂಭಿಸಿದ 'ಮೊಗ್ಗು' ಹಾಗೂ 'ವಿಶ್ವಾಮಿತ್ರ' ಎಂಬ ಕೈಬರಹದ ಪತ್ರಿಕೆಗಳ ಬರಹಗಾರರಲ್ಲಿ ಅವರೂ ಒಬ್ಬರಾದರು. ಆ ಪತ್ರಿಕೆಗಳಿಗೆ ಇವರು ಲಾವಣಿಗಳನ್ನೂ 'ಕವಿಕರ್ಣ' ಎಂಬ ಕಾವ್ಯನಾಮದಿಂದ

ಅದೆಷ್ಟೋ ಕಂದ ಪದ್ಯಗಳನ್ನೂ ಬರೆದರು. ಇಲ್ಲಿಂದ ಪ್ರಾರಂಭವಾದ ಇವರ ಕಾವ್ಯ ಸೃಷ್ಟಿ 'ಜಯಕರ್ನಾಟಕ' ದವರೆಗೂ ಹಬ್ಬಿತು. ಅವರಿಗೆ 'ಆನಂದ ಕಂದ', 'ಕವಿಕರ್ಣ', 'ಕಾಡಹಕ್ಕಿ' ಎಂಬ ಬೇರೆ ಬೇರೆ ನಾಮಗಳಿದ್ದವು. ಅವುಗಳಲ್ಲಿ 'ಕಾಡಹಕ್ಕಿ' ಎಂಬುದು ಮಾತ್ರ ಅವರ ಕವನ ಸಂಗ್ರಹದೊಂದಿಗೆ ಬದುಕುಳಿದಿದೆ.

ಪಿ.ಧೂಲಾಸಾಹೇಬರು ಒಂದಿಷ್ಟು ಹೆಚ್ಚಾಗಿ ಲಾವಣಿಗಳ ಸಂಬಂಧವಿರಿಸಿಕೊಂಡಂತೆ ತಿಳಿದುಬರುತ್ತದೆ. ಅವರು ಕೆಲವು ಕಾಲ ಲಾವಣಿಯ ಹಾಡುಗಾರ ಓಲೆಕಾರ ರಾಮಚಂದ್ರನೊಂದಿಗೆ ನಿಕಟ ಸಂಪರ್ಕವಿರಿಸಿಕೊಂಡು ಅವನೊಂದಿಗೆ ಅಲೆದಾಡಿದ್ದಾರೆ. ರಾಮಚಂದ್ರನೊಂದಿಗೆ ಶಿವರಾಮ ಕಾರಂತರ ಪುತ್ತೂರಿನವರೆಗೂ ಅವರು ಹೋಗಿಬಂದದ್ದುಂಟು.

ನಾಡು-ನುಡಿಗಳ ಜಾಗೃತಿಯಲ್ಲಿ ತೊಡಗಿದ್ದ ಬಾಗಲಕೋಟೆಯ ಶ್ರೀ ಮಂಗಳವೇಡೆ ಶ್ರೀನಿವಾಸರಾಯರ 'ಕನ್ನಡಿಗ' ಪತ್ರಿಕೆಯಲ್ಲಿಯೂ ಧೂಲಾಸಾಹೇಬರು ಕಾರ್ಯವಾಡಿದರು. ಶ್ರೀ ಶಿವರಾಮ ಕಾರಂತರೊಡನೆ ಸ್ನೇಹ-ಸಂಬಂಧವನ್ನು ಬೆಳೆಸಿ ನಾಟಕ ಸಂಘವನ್ನು ಕಟ್ಟಿಕೊಂಡರು. ಚರವಿದ್ಯಾಲಯದಂತೆ, ನಾಡು-ನುಡಿಗಳ ಸೇವೆ ಮಾಡಬೇಕೆನ್ನುವ ಕಾರಂತರ ವಿಚಾರಗಳಿಗೆ ಪೋಷಕವಾಗುವಂತೆ ಅವರೊಡನೆ ವಿಜಾಪುರ ಜಿಲ್ಲೆಯೊಳಗಿನ ಹಲವು ಹಳ್ಳಿಗಳಲ್ಲಿ ಅಡ್ಡಾಡಿ ಬಂದರು.

ಪಿ. ಧೂಲಾಸಾಹೇಬರು ಜಯಕರ್ನಾಟಕ ಉಪಸಂಪಾದಕರಂತೆ ಕೆಲಸಮಾಡುತ್ತಾ, ಹತ್ತೆಂಟು ಸಣ್ಣ ಕಥೆಗಳನ್ನು ಬರೆದರು.

1923ರಲ್ಲಿ ವಿಜಾಪೂರದಲ್ಲಿ ಜರುಗಿದ 9ನೇ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ಮಧುರಚೆನ್ನರು 'ಸುನೀತಿ ದೇವಿಯೇ ನಿದ್ದೆ ತಿಳಿದು' ಎಂಬ ಪದವನ್ನು ಹಾಡಿ ಶ್ರೋತೃಗಳನ್ನು ತಣಿಸಿದರಲ್ಲದೆ, 'ಬೀಸುವ ಕಲ್ಲಿನ ಹಾಡುಗಳು' ಎಂಬ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಪ್ರಬಂಧವನ್ನು ಓದಿದರು. ಇದೇ ಸಂದರ್ಭದಲ್ಲಿ ಪಿ.ಧೂಲಾಸಾಹೇಬರು 'ಲಾವಣಿಯ ಲಾವಣ್ಯ' ಎಂಬ ಪ್ರಬಂಧವನ್ನು ಮಂಡಿಸಿದ್ದು ಗಮನಾರ್ಹವಾಗಿದೆ.

ಪಿ.ಧೂಲಾ ಸಾಹೇಬರ ಜೀವನಾದರ್ಶದ ಪ್ರತೀಕವಾಗಿ ಮೂಡಿಬಂದ 'ಅರವಿಂದ ಗ್ರಂಥಮಾಲೆ' ಯ ಸವಿನೆನಪಿಗಾಗಿ 1938ರಲ್ಲಿ ಪ್ರಕಟವಾದ ಅವರ ಸ್ವತಂತ್ರ ಕವನ ಸಂಕಲನ 'ವೀರಪಥಿಕ' ಹಾಗೂ ಸಿಂಪಿ ಲಿಂಗಣ್ಣನವರ ಜೊತೆಗೂಡಿ ಸಂಗ್ರಹಿಸಿ ಪ್ರಕಟಿಸಿದ 'ಜೀವನ ಸಂಗೀತ' ಎಂಬ ಜಾನಪದ ಲಾವಣಿಗಳ ಸಂಗ್ರಹ ಎರಡು ಮೌಲಿಕವಾದ ಕೃತಿಗಳು ಕನ್ನಡ ಸಾರಸ್ವತ ಪ್ರಪಂಚಕ್ಕೆ ನೀಡಿದ ಅಮೂಲ್ಯ ಕೊಡುಗೆಗಳಾಗಿವೆ.

ಸಾಹಿತ್ಯ ಕ್ಷೇತ್ರದಲ್ಲಿ ಕಾಲಿರಿಸಿದ ಪಿ.ಧೂಲಾ ಸಾಹೇಬರು ಗಕ್ಕನೆ ರಾಷ್ಟ್ರೀಯ ಆಂದೋಲನದ ಕಡೆಗೆ ಹೊರಳಿದರು. ಬಾಗಲಕೋಟೆಯ ಹಿಂದುಸ್ತಾನಿ ಸೇವಾದಳವನ್ನು ಸೇರಿ ರಾಷ್ಟ್ರ ಕಾರ್ಯಕ್ಕೆ ಅಣಿಯಾದರು. ದೇಶಕ್ಕೆ ಸ್ವಾತಂತ್ರ್ಯ ದೊರೆಯುದ ಹೊರತು ತಲೆಗೂದಲನ್ನು ಕತ್ತರಿಸುವುದಿಲ್ಲವೆಂದೂ, ಲಗ್ನವಾಗುವುದಿಲ್ಲವೆಂದೂ ಪ್ರತಿಜ್ಞೆ ಕೈಕೊಂಡದ್ದು ಆಗಲೇ. ಈ ಭೀಷ್ಮಪ್ರತಿಜ್ಞೆಯನ್ನು ಅವರು ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದದ್ದು ಒಂದು ಅನುಪಮ ತಪಸ್ಸೆಂದೇ ಹೇಳಬೇಕು. ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ 1924ರಲ್ಲಿ ಬೆಳಗಾವಿಯಲ್ಲಿ ನಡೆದ

ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂ ಸೇವಕರಾಗಿ ಪಾಲ್ಗೊಂಡರು. ಈ ಸಂದರ್ಭದಲ್ಲಿ ಪಿ. ಧೂಲಾ ಅವರು ಗಾಂಧೀಜಿ ಅವರ ದರ್ಶನ ಪಡೆದು ಅವರಿಂದ ಇನ್ನಷ್ಟು ಪ್ರಭಾವಿತರಾದರು. ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಭೂಗತರಾಗಿ ಬ್ರಿಟಿಷರ ವಿರುದ್ಧ ಚಟುವಟಿಕೆಗಳನ್ನು ನಡೆಸುತ್ತ ಜನರಲ್ಲಿ ಸುಪ್ತಾವಸ್ಥೆಯಲ್ಲಿದ್ದ ದೇಶಪ್ರೇಮವನ್ನು ಜಾಗೃತಗೊಳಿಸುತ್ತಿದ್ದರು. ಸ್ವಾತಂತ್ರ್ಯದ ಕನಸನ್ನು ಕಂಡ ಈ ದೇಶಭಕ್ತನು ಸ್ವಾತಂತ್ರ್ಯ ಪೂರ್ವದಲ್ಲಿಯೇ ಅಸ್ತಂಗತನಾದುದು ಒಂದು ದುರ್ದೈವದ ಸಂಗತಿ.

"ಧೂಲಾ ಸಾಹೇಬರದು ಗಂಭೀರ ವ್ಯಕ್ತಿತ್ವ. ದಪ್ಪವಾದ ದೇಹ, ತುಂಬಿದ ಮುಖ, ಶಾಂತವಾದ ಕಳೆ. ಇವು ಆತನ ವ್ಯಕ್ತಿತ್ವವನ್ನು ರೂಪಿಸಿದ್ದವು. ದೊಡ್ಡದಾದ ಖಾದಿ ಅಂಗಿ, ತಲೆಗೆ ಹದಿನಾಲ್ಕು ಮೊಳದ ಪಟಕ, ತಿರುವಿದ ಕಚ್ಚೆ, ದಪ್ಪಕಾಲ್ಮರಿ, ಇವು ಆತನ ವ್ಯಕ್ತಿತ್ವಕ್ಕೆ ಅಲಂಕಾರಗಳು" ಎಂದು ಅವರ ಘನವಾದ ವ್ಯಕ್ತಿತ್ವವನ್ನು ಸಿಂಪಿ ಲಿಂಗಣ್ಣನವರು ಚಿತ್ರಿಸಿದ್ದಾರೆ.

ಹಲಸಂಗಿ ಗೆಳೆಯರ ಗುಂಪಿನ ಸ್ನೇಹಿತರು ಪರಸ್ಪರ ಶ್ರೇಯೋಭಿವೃದ್ಧಿಗಾಗಿ ಪ್ರೇರಕ, ಪೂರಕ, ಪೋಷಕ, ಶಕ್ತಿಯಾಗಿ ಪ್ರತಿಯೊಬ್ಬರೂ ಪ್ರತಿಯೊಂದು ಚಟುವಟಿಕೆಗಳಲ್ಲಿ ಸಂಪ್ರೀತಿಯಿಂದ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಎಲ್ಲರ ಬಾಳು ಬಂಗಾರವಾಗಲೆಂದು ದೇವರಲ್ಲಿ ಪ್ರಾರ್ಥಿಸುತ್ತಿದ್ದರು.

"ಪಿ. ಧೂಲಾಸಾಹೇಬರ ಜೀವನದ ಕೆಲಭಾಗವು ಸಾರ್ವಜನಿಕ ಸೇವೆಯಲ್ಲಿ ಕಳೆದಿದೆ. ತಾಯಿತ-ತಂತ್ರಗಳಲ್ಲಿಯೂ ಒಂದಿಷ್ಟು

ಅಂಟಿಸಿಕೊಂಡಿದ್ದ ಅವರು ಆಯುರ್ವೇದ ಔಷಧೋಪಚಾರದ ಪರಿಚಯವನ್ನು ಕೆಲಮಟ್ಟಿಗೆ ಮಾಡಿಕೊಂಡಿದ್ದರು. ಅದರಿಂದ ಅವರು ಒಂದಿಷ್ಟು ಲೋಕೋಪಕಾರಕ ಕಾರ್ಯವನ್ನು ಮಾಡುವಂತಾಯಿತು.

ಕನ್ನಡ ಸಾಹಿತ್ಯದಲ್ಲಿ ಮಹಮ್ಮದೀಯ ಕವಿಗಳು ದೊರೆಯುವುದು ದುರ್ಲಭ. ಪಿ. ಧೂಲಾಸಾಹೇಬರು ನವೋದಯ ಕಾಲದ ಪ್ರಥಮ ಮಹಮ್ಮದೀಯ ಕವಿಗಳು. ಧಾರವಾಡದ ಗೆಳೆಯರ ಗುಂಪಿನವರು ಪ್ರಕಟಿಸಿದ ಪ್ರಾತಿನಿಧಿಕ ಕವನ ಸಂಕಲವಾದ 'ಹಕ್ಕಿ ಹಾಡುತಿದೆ' ಎಂಬ ಕವನ ಸಂಗ್ರಹದಲ್ಲಿ ಇವರಿಗೂ ಒಂದು ಸ್ಥಾನ ಇರುವುದನ್ನು ಗಮನಿಸಬೇಕು.

"ಪಿ. ಧೂಲಾ ಅವರು ಹಲಸಂಗಿಗೆ ಬಂದ ನಂತರ ಕೆಲಕಾಲ ಒಕ್ಕಲುತನದ ಕಡಗೆ ಲಕ್ಷ್ಯವಹಿಸಿದರು. ಬಾವಿಯನ್ನು ತೋಡಿಸಿ, ಎರಡು ಅಂತಸ್ತಿನ ಕಟ್ಟಿಗೆಯ ಹಂದರಬಾರಿ ಕಟ್ಟಿಸಿ ಮಟ್ಟಿಯಿಂದ ನೀರೆತ್ತುವ ಯೋಜನೆಯನ್ನು ರೂಪಿಸಿದರು. ತೋಟದಲ್ಲಿ ಮಾವು, ದಾಳಿಂಬೆ, ಪೇರಲ ಮುಂತಾದ ಹಣ್ಣಿನ ಗಿಡಗಳನ್ನು ಹಚ್ಚಿದರು. ಶಿಕ್ಷಣದಿಂದ ವಂಚಿತರಾದ ಹರಿಜನ ಮಕ್ಕಳನ್ನು ಕಂಡು ಮಮ್ಮಲ ಮರುಗಿದರು. ಅವರ ಭಾವೀ ಭವಿಷ್ಯ ಉಜ್ವಲಗೊಳಿಸುವ ಉದ್ದೇಶದಿಂದ ಗೆಳೆಯರ ಗುಂಪಿನ ಸದಸ್ಯರಾದ ಆದಮ್ ಸಾಹೇಬ ಮಸಳಿ ಅವರನ್ನು ಕರೆತಂದು ಹರಿಜನಕೇರಿಯ ಚಾವಡಿಯಲ್ಲಿ ಆ ಮಕ್ಕಳಿಗೆ ವಿದ್ಯಾಭ್ಯಾಸ ಕಲಿಸುವ ಏರ್ಪಾಡು ಮಾಡಿದರು" ಎಂದು ಪೀ ಧೂಲಾಸಾಹೇಬರ ಸಹೋದರ ಜಲಾಲ್ ಖಾನರ ಪುತ್ರರಾದ 81 ವಯಸ್ಸಿನ ಹುಸೇನ ಸಾಹೇಬ್ ಅವರು ಅಭಿಮಾನದಿಂದ ಹೇಳುತ್ತಾರೆ.

ಧೂಲಾ ಸಾಹೇಬರು 1940ರಲ್ಲಿ ಪ್ಲೇಗ ಬೇನೆಗೆ ತುತ್ತಾದರು. ಅವರಿಗಾಗ ನಾಲ್ಕು ದಶಕ ಕೂಡ ಸಂದಿರಲಿಲ್ಲ. ಅವರ ಅಕಾಲಿಕ ನಿಧನವು ಅವರ ಸ್ನೇಹಿತರಿಗೆಲ್ಲ ಅಪಘಾತಕರವಾದ ದುಃಖದ ಪ್ರಸಂಗ. ಆಗ ವಿನೀತ ರಾಮಚಂದ್ರರಾಯರು ಜಯಕರ್ನಾಟಕ ಪತ್ರಿಕೆಯಲ್ಲಿ ಬರೆದ ಒಂದು ಶ್ರದ್ಧಾಂಜಲಿಯನ್ನು ನೋಡಿದರೆ ಧೂಲಾಸಾಹೇಬರ ವೈಶಿಷ್ಟ್ಯಪೂರ್ಣವಾದ ವ್ಯಕ್ತಿತ್ವವೇ ಕಣ್ಣಮುಂದೆ ಬರುವುದು : "ನನ್ನ ಆಪ್ತಮಿತ್ರರಲ್ಲೊಬ್ಬರಾದ ಹಲಸಂಗಿಯ ಧೂಲಾಸಾಹೇಬರು 25–1–1940ನೇ ದಿನ ಪ್ಲೇಗಿನ ಬೇನೆಯಿಂದ ಕಾಲವಶರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇನೆ...... ಜಾತಿಯಿಂದ ಮುಸಲ್ಮಾನರು. ಆದರೆ ಅವರ ನಡೆ ನುಡಿ, ಸಂಸ್ಕೃತಿಗಳೆಲ್ಲ ಅಚ್ಚ ಹಿಂದೂವನ್ನು ಮೀರಿಸುತ್ತಿದ್ದವು. ಒಳ್ಳೆಯ ನಿಗ್ರಹಿಯಾದ ಜೀವನ ಅವರದು. ಚಮು ಚಮು ನಸುಕಿನಲ್ಲಿ ತಣ್ಣೀರಿನ ಸ್ನಾನ, ಜಪಾನುಷ್ಠಾನ ಅವರ ನಿತ್ಯದ ಕಾರ್ಯಕ್ರಮವಾಗಿತ್ತು. ಕೊನೆತನಕ ಬ್ರಹ್ಮಚಾರಿಗಳಾಗಿದ್ದರು..... ಹಲಸಂಗಿಯ ಶ್ರೀ ಮಧುರಚೆನ್ನ, ಸಿಂಪಿಲಿಂಗಣ್ಣ, ಕಾಪಸೆ ರೇವಪ್ಪ, ಮೊದಲಾದ ಓರಿಗೆಯ ಗೆಳೆಯರ ಜೊತೆ ತನುಮನಗಳಿಂದ ದುಡಿದು ಆ ಗೆಳೆಯರ ಬಳಗವು ಕರ್ನಾಟಕದ ಸಾಹಿತ್ಯ ಕ್ಷೇತ್ರದಲ್ಲಿ ಮತ್ತು ಜನಜೀವನದಲ್ಲಿ ಒಂದು ಗಣ್ಯಸ್ಥಾನ ಪಡೆಯುವಂತೆ ಮಾಡಿದವರಲ್ಲಿ ಇವರೊಬ್ಬರಾಗಿದ್ದರು......"

ವೀರ ಪಥಿಕ

ಹಲಸಂಗಿ ಗೆಳೆಯರಲ್ಲಿ ಮಧುರ ಚೆನ್ನ, ಸಿಂಪಿಲಿಂಗಣ್ಣನವರ ಬಳಿಕ ತಮ್ಮ ಕವಿತ್ವ ಶಕ್ತಿಯಿಂದ ಓದುಗರ ಗಮನ ಸೆಳೆದ ಕವಿ ಪಟೇಲ ಧೂಲಾಸಾಹೇಬರು. ಕಾವ್ಯ ವಸ್ತು, ಭಾವ, ಭಾಷೆ ಹಾಗೂ ಛಂದಸ್ಸಿನಿಂದ ಅವರ ಕವಿತೆಗಳಿಗೆ ವಿಶೇಷ ಸ್ಥಾನ ದೊರೆಯುತ್ತದೆ. ಪಿ. ಧೂಲಾ

ಅವರು ಬರೆದದ್ದು ಕೇವಲ ಒಂದೇ ಒಂದು ಗ್ರಂಥ. ಅದು 'ವೀರ ಪಥಿಕ'. ಗ್ರಂಥ ಚಿಕ್ಕದಾದರೂ ಸತ್ವದಲ್ಲಿ ಅದರ ಹಿರಿಮೆ ಅಗಾಧವಾದುದು.

1938ರಲ್ಲಿ ಪ್ರಕಟವಾದ 'ವೀರಪಥಿಕ'ದಲ್ಲಿ ಒಟ್ಟು ಹನ್ನೊಂದು ಕವಿತೆಗಳಿವೆ. ಅವುಗಳಲ್ಲಿ ಹತ್ತು ಭಾವಗೀತೆಗಳಾದರೆ, ಒಂದು ಅಪೂರ್ವವೆನಿಸುವ ಖಂಡಕಾವ್ಯವಿದೆ.

'ವೀರಪಥಿಕ' ವನ್ನು ಸೂಕ್ಷ್ಮವಾಗಿ ಅವಲೋಕಿಸಿದ ಮಧುರ ಚೆನ್ನರು ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ : "ತಮ್ಮ ತಮ್ಮ ಜೀವನವನ್ನು ವಿಶಿಷ್ಟ ಧ್ಯೇಯದ ಪಡಿಯಚ್ಚಿನಲ್ಲಿ ಎರಕ ಹೊಯ್ಯುವ ಆಧುನಿಕ ಧ್ಯೇಯವಾದಿ ಯುವಕರೆಲ್ಲರ ಜೀವನಪಥದಲ್ಲಿ ಬರುವ ದುರಂತ ಉತ್ಥಾನ ಪತನಗಳ ಹೃದಯೋಚ್ಛ್ವಾಸದ ತರಂಗಗಳೇ ಈ ಕವಿತೆಗಳು. ಹೊರಗಿನ ಒಳಗಿನ ಅಪರಿಮಿತ ವಿಘ್ನಬಾಧೆಗಳನ್ನು ಎದುರಿಸಿ ತಮ್ಮ ಧ್ಯೇಯದೆಡೆಗೆ ಸಾಗುವ ವೀರಪಥಿಕರ ಹಾದಿಯ ಹಾಡುಗಳಿವು".

ಪಥಿಕನೆದುರಿಗೆ ಒಂದು ದಿವ್ಯ ಪ್ರಕಾಶವಿದೆ. ಅದನ್ನು ತನ್ನದಾಗಿಸಿಕೊಳ್ಳುವ ತವಕ ಆ ದಾರಿಹೋಕನಿಗಿದೆ. ಆದ್ದರಿಂದ ವೀರ ಪಥಿಕನ ಸಾಧನೆಯನ್ನು ತಿಳಿಯಬಯಸುವ ನಾವೂ ಕೂಡ ಜೊತೆಯಾಗಿ ನಡೆಯಬೇಕು. ಆಗ ಅವನ ಆಂತರ್ಯವನ್ನು ಅರಿಯಲು ಸಾಧ್ಯವಾಗುತ್ತದೆ.

ಇಲ್ಲಿನ ಕವಿತೆಗಳು ವಸ್ತುನಿಷ್ಠವಾಗಿರದೆ, ವ್ಯಕ್ತಿನಿಷ್ಠವಾಗಿವೆ. ಸಾಧಕ ತನ್ನ ದಾರಿಯಲ್ಲಿ ಬರುವ ಎಡರು ತೊಡರುಗಳನ್ನು ಬದಿಗೆ ತಳ್ಳುತ್ತ ಗುರಿಯೆಡೆಗೆ ಸಾಗುವ ಹಾಗೂ ಆ ಸಾಧನೆಯಿಂದ ಹೊಸ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಅನುಭವಗಳನ್ನು ಕಾಣುತ್ತೇವೆ.

ವೀರಪಥಿಕದ ಹತ್ತು ಕವನಗಳಲ್ಲಿ ಒಂದೇ ಶ್ರುತಿ ಹಾಗೂ ಧ್ಯಾನಗಳಿರುತ್ತವೆ. ಈ ಸೃಷ್ಟಿಯ ಹುಟ್ಟು, ನಾಶ, ಸೊಬಗು, ಬೆಡಗು, ಆಗುಹೋಗುಗಳಿಗೆ ಕಾರಣನಾದ ಪರಮಾತ್ಮನ ಇರುವನ್ನು ಶೋಧಿಸಿ ಒಲಿಸಿಕೊಳ್ಳುವ ಪ್ರಯತ್ನ, ಆತುರ, ಹಂಬಲಗಳು ಗರಿಗೆದರಿ ಕುಣಿದಿವೆ. ಆ ದೇವನ ಕೃಪೆಯನ್ನು ಪಡೆಯುವುದೇ ಪಥಿಕನ ಅಂತಿಮ ಗುರಿಯಾಗಿದೆ:

ನಡೆದಿಹೆನು ನಡೆದಿಹೆನು ಅಡವಿಯ ಅರಣ್ಯದಲಿ
ಮುಂಜಾನದಲಿ ನಿನಗೆ ಕಾಣದೇನು?
ಕಾಡುಕತ್ತಲೆಯು ಸುತ್ತು ಬಿತ್ತರಿಸಿ ಮುತ್ತುತಿಹ
ಮೊದಲೆ ಬೆಳಕನು ಕೊಡಲು ಬಾರದೇನು.

ಬದುಕಿನ ದಂಡಕಾರಣ್ಯದಲ್ಲಿ ಸಾಗಿರುವ ಪಥಿಕನ ಏಕೈಕ ಗುರಿ ಬೆಳಕನ್ನು ಕಾಣುವುದು. ಸಾಧನೆಯ ಮಾರ್ಗದಲ್ಲಿನ ಕಲ್ಲು ಮುಳ್ಳುಗಳನ್ನು ನಿವಾರಿಸಿ ತನ್ನನ್ನು ಎತ್ತಿಕೊಳ್ಳಲು ದೇವರಲ್ಲಿ ಮೊರೆ ಇಡುತ್ತಾನೆ. ಅಳುವ ಮಗುವನ್ನು ಎತ್ತಿ ಅಪ್ಪಿ ಸಂತೈಸುವುದು ತಾಯಿಯ ಕರ್ತವ್ಯವಾಗಿರುವಂತೆ ಸಾಧಕನ ಕೈಹಿಡಿದೆತ್ತಿ ಬೆಳಕುತೋರುವುದು ಸೃಷ್ಟಿ ಕರ್ತನ ಕರ್ತವ್ಯವಾಗಿದೆ.

'ಪಥಿಕ' ಕವಿತೆಯಲ್ಲಿ ಪ್ರಕೃತಿಯ ವಿವರಣೆಯಿದೆ. ಆತ ತರು-ಲತೆ, ಹೂಹಣ್ಣು, ಹಕ್ಕಿಗಳಿಂಚರದಲ್ಲಿ ಕರ್ತಾರನ ಅಸ್ತಿತ್ವವನ್ನು ಕಾಣುತ್ತಾನೆ:

ಸುಳಿವುದೋರದೆ ನೀನು ನನ್ನಲ್ಲೆ ಅವಿತಿದ್ದು
ನನ್ನ ಮರೆವುದು ನಿನಗೆ ಉಚಿತವೇನು?

ಪ್ರಕೃತಿಯ ವರ್ಣನೆಯೊಂದಿಗೆ ಪ್ರಾರಂಭವಾಗುವ 'ವಸಂತನ ಕರೆ' ಎಂಬ ಕವಿತೆ ತತ್ವಚಿಂತನೆಯತ್ತ ಸಾಗುತ್ತದೆ.

ಹೊಸದೊಂದು ಹೊಂಬಣ್ಣ ಕೆಂಬಣ್ಣ ಹೂಗಳು
ಮರೆವಾದವೆಂದು ನಾವರಚಲೇಕೆ?
ಕಸಕಾಗಿ ಹಣ್ಣಾಗಿ ವಾಸಂತ ಕುವರನಿಗೆ
ಮೊಲೆಗೊಡಲು ಬರುತಿರಲು ಚಿಂತೆಯೇಕೆ?

ಇಲ್ಲಿ ಕವಿಯ ಕಲ್ಪನಾಶಕ್ತಿಯ ಹಿರಿಮೆಯನ್ನು ಕಾಣುತ್ತೇವೆ. ಕವಿ ಪಿ. ಧೂಲಾರವರ ಕವಿತೆಗಳಲ್ಲಿ ನಿಸರ್ಗಪೂಜೆಯ ಭಾವಪರವಶತೆಯಿದೆ.

'ಕಂಡೆ' ಕವಿತೆಯಲ್ಲಿ ಸಾಧಕ ಪೂರ್ಣತೆಯತ್ತ ಸಾಗಿ ಮುನ್ನಡೆವ ಲಕ್ಷಣವಿದೆ. ಇಲ್ಲಿ ಪ್ರಕೃತಿಯೇ ಮೋಕ್ಷದ ಪಥವಾಗಿದೆ. ಕವಿ ಅನುಭವದಿಂದ ಅನುಭಾವದೆಡೆಗೆ ಸಾಗುತ್ತಾನೆ. ಮರ್ತ್ಯಲೋಕದ ಸೃಷ್ಟಿಯ ಸೊಬಗು ಸುರಲೋಕಕ್ಕಿಂತಲೂ ಮಿಗಿಲೆಂಬ ಭಾವನೆ ಕವಿಗಿದೆ:

ಝುರಿಯೊಂದು ಚಿಮ್ಮುತಿದೆ ಗಿರಿಶಿಖರದಲ್ಲಿ
ದರಿಯಲ್ಲಿ ಉರಿಯುತಿದೆ ಬಹುದೂರದಲ್ಲಿ
ಹರವಿಕೊಂಡಿದೆ ಹಸರು ಧರಣಿಯಲ್ಲಿ
ಸುರರಿಗೀ ಸುಖವಿಲ್ಲ ಸುರಲೋಕದಲ್ಲಿ.

ಪಿ. ಧೂಲಾರ ಬಹುಕಾಲದ ಆಶಯ 'ಸಾವು ಹೂವು' ಕವಿತೆಯಲ್ಲಿ ಸಿದ್ಧಿಯ ಶಿಖರವೇರಿ ನಿಂತಿದೆ:

ನಾನು ನನ್ನದು ತೊರೆದೆ
ಧ್ಯಾನಗಾನದಿ ಬೆರೆದೆ
ಭಾವವೇರಿತು ಹರಿದು ಸಕಲ ಪರದೆ ।
ಭಾವಭಕ್ತಿಯ ಭರದೆ

ಜೀವ ಅರ್ಪಿಸಿ ಕರೆದೆ
ಸಾವು ನೋವಿನ ತಡೆಯನೊಡೆದು ಮೆರೆದೆ ॥

ಪಿ.ಧೂಲಾ ಅವರು ಓರ್ವ ಮಹಮ್ಮದೀಯರು. ಅವರು ಬೆಳೆದದ್ದು ಹಿಂದೂ ಪರಿಸರದಲ್ಲಿ. ಅವರದು ಶರಣನಾಡು. ಪಡೆದದ್ದು ಶರಣ ಸಂದೇಶ. ಏರಿದ್ದು ಅನುಭಾವದ ಶಿಖರ. ಮುಕ್ತಿಗೆ ಜಾತಿಯ ನಿರ್ಬಂಧವಿಲ್ಲ. ಅದು ಜಾತ್ಯಾತೀತವಾದದ್ದು. ಪಾರಮಾರ್ಥಿಕ ಸಾಧನೆಗೆ ವ್ಯಕ್ತಿ ಮುಖ್ಯವಲ್ಲ, ಸಾಧನೆ ಅವಶ್ಯ.

"ಅರಬಿಯದ ಅಭಿಮನ್ಯು" ಪಿ. ಧೂಲಾರ ಖಂಡಕಾವ್ಯ. ಅದು ವೀರ ಕಾಸೀಮನ ಶೌರ್ಯವನ್ನು ಚಿತ್ರಿಸುವ ಕವನವಾಗಿದೆ. ಇದರಲ್ಲಿ ಎರಡು ಭಾಗಗಳಿವೆ. ಒಂದನೆಯದು 'ಭಾವದಲ್ಲಿ', ಇನ್ನೊಂದು 'ರಣದಲ್ಲಿ'. 'ಭಾವದಲ್ಲಿ' ಕಾವ್ಯ ಭಾಗವು ಪಿ. ಧೂಲಾಸಾಹೇಬರ ಆದರ್ಶ ಬದುಕಿನ ಪಡಿನೆರಳಾಗಿದೆ. ಸಾಹಿತ್ಯ ಬರೆಹಗಾರನ ವ್ಯಕ್ತಿತ್ವದ ಪ್ರತಿರೂಪವಾಗಿರುತ್ತದೆ. ಬಹುತರವಾಗಿ ಕವಿಯ ಕಲ್ಪನೆ, ಅಭಿಪ್ರಾಯ, ಅನಿಸಿಕೆಗಳು ಅವನ ಕಾವ್ಯದಲ್ಲಿ ಹರಡಿಕೊಂಡಿರುತ್ತವೆ. ಅವನ ಆದರ್ಶ ವ್ಯಕ್ತಿತ್ವವನ್ನು ಅವನೇ ರಚಿಸಿದ ಕಾವ್ಯಕನ್ನಡಿಯಲ್ಲಿ ನೋಡಬಹುದಾಗಿದೆ. 'ಭಾವದಲ್ಲಿ' ಎಂಬ ಭಾಗದಲ್ಲಿ ಪಿ. ಧೂಲಾರ ವ್ಯಕ್ತಿತ್ವವನ್ನು ಕಾಣಬಹುದಾಗಿದೆ.

ಧೂಲಾಸಾಹೇಬರ ನಿಜನಾಮ ಕಾಸೀಮ ಸಾಹೇಬ. ಅರೇಬಿಯದ ಐತಿಹಾಸಿಕ ಪಾತ್ರದ ಹೆಸರೂ ಕಾಸೀಮ. ಅರೇಬಿಯದ ಕಾಸೀಮನ ಪಾತ್ರದಲ್ಲಿ ಧೂಲಾಸಾಹೇಬರು ತನ್ನತನವನ್ನು ಸಾಂಗತ್ಯಗೊಳಿಸಿ ಒಂದು ದೀರ್ಘವಾದ ಕಥನ ಕವನವನ್ನು ಬರೆದಿದ್ದಾರೆ. ಹಾಗೆ ನೋಡಿದರೆ 'ಭಾವದಲ್ಲಿ' ಎಂಬ ಕಾವ್ಯಭಾಗ ಪಿ. ಧೂಲಾ ಅವರ ಬಾಳಿನ ಸಾಧನೆಯ ಕಥಾನಕವೇ ಆಗಿದೆ.

ಹಜರತ ಮಹಮ್ಮದ ಪೈಗಂಬರರ ಮರಿಮಗನೇ ಕಿಶೋರ ಕಾಸೀಮ. ಅವನು ಕಾಳಗದ ಕಣದಲ್ಲಿ ಮಹಾಭಾರತದ ವೀರ ಅಭಿಮನ್ಯುವಿನಂತೆ ಹೋರಾಡಿ ಮೃತ್ಯುವನ್ನು ಗೆದ್ದು ಅಮರತ್ವ ಪಡೆದ ಸನ್ನಿವೇಶವನ್ನು ಓದುತ್ತಿದ್ದಂತೆ ವೀರರಸ ಚಿಮ್ಮಿ ಹರಿಯುತ್ತದೆ. ಕಾಸೀಮ ರಣರಂಗದಲ್ಲಿ ಮಡಿದರೂ ಅವನ ಸಾವು ಆತ್ಮವಿಜಯದ ಪ್ರತಿಯಾಗಿ ಇಂದಿಗೂ ಧರ್ಮಾನುಯಾಯಿಗಳ ಪ್ರೀತಿಗೆ ಪಾತ್ರವಾಗಿದೆ.

ಪೈಗಂಬರರು ತಮ್ಮ ಧರ್ಮಕಾರ್ಯವನ್ನು ಪೂರೈಸಿ ದೇಹವನ್ನು ಬಿಟ್ಟಮೇಲೆ ಧರ್ಮ ಸಿಂಹಾಸನದ ಹಕ್ಕಿಗಾಗಿ ಅವರ ಮೊಮ್ಮಕ್ಕಳಿಗೂ ಶಿಷ್ಯರ ಮಕ್ಕಳಿಗೂ ಪೈಪೋಟಿ ನಡೆಯುತ್ತದೆ. ಪೈಗಂಬರರ ಮಗಳು ಹಸಿನಾಬಾನುಳ ಹಿರಿಯ ಮಗ ಹಸನರನ್ನು ಶತ್ರು ಪಕ್ಷದವರು ಮೋಸದಿಂದ ವಿಷಪ್ರಾಶನ ಮಾಡಿಸಿ ಹೆಣ್ಣುಮಕ್ಕಳಿಂದ ಕೊಲೆ ಮಾಡಿಸುತ್ತಾರೆ. ಬಳಿಕ ಶತ್ರು ಎಝಿದನು ಹಸನರ ಕಿರಿಯ ಸಹೋದರನಾದ ಹಜರತ ಹುಸೇನರನ್ನು ಕೊಲೆಮಾಡಲು ಮುಂದಾಗುತ್ತಾನೆ. ಕರ್ಬಲಾದ ಮರಳಿನ ಬಯಲಿನಲ್ಲಿ ಘೋರವಾದ ಯುದ್ಧ ನಡೆಯುತ್ತದೆ. ವೈರಿಗಳು ಇದ್ದೊಂದು ನದಿಯಲ್ಲಿ ವಿಷಬೆರೆಸಿ ಹುಸೇನರ ಸೈನಿಕರಿಗೆ ನೀರು ಸಿಗದಂತೆ ಮಾಡುತ್ತಾರೆ. ದಂಡಾಳುಗಳು ಒಬ್ಬೊಬ್ಬರಾಗಿ ಮಡಿಯುತ್ತಿರುವುದನ್ನು ಕಂಡು ಹಸನರ ಮಗನಾದ ಕಿಶೋರ ಕಾಸೀಮನ ರಕ್ತ ಕುದಿಯತೊಡಗುತ್ತದೆ. ಅವನು ವೈರಿಗಳನ್ನು ಸದೆಬಡಿಯಲು ಚಿಕ್ಕಪ್ಪನನ್ನು ಕೇಳುತ್ತಾನೆ. ಕಾಸೀಮನ ಮಹತ್ವಾಕಾಂಕ್ಷೆಯನ್ನು ಅರಿತ ಚಿಕ್ಕಪ್ಪ ಅನುಮತಿ ನೀಡಲಿಲ್ಲ. ಆದರೆ ಕಾಸೀಮನಿಗೆ ಮುಂದಿಟ್ಟ ಹೆಜ್ಜೆಯನ್ನು ಹಿಂದೆ ಇಡಲು ಆಗಲಿಲ್ಲ.

ಹುಸೇನ ಸಾಹೇಬರ ಅಭಿಪ್ರಾಯದಂತೆ ಕಾಸೀಮನು ತಾಯಿಯ ಅಪ್ಪಣೆಯನ್ನು ಕೇಳಲು ಹಸೀನಾಬಾನುವಿನ ಬಳಿ ಹೋಗುತ್ತಾನೆ. ತಾಯಿ ಮೊದಮೊದಲು ಹಿಂದೇಟು ಹಾಕಿ, ವೀರಮಾತೆಗೆ ತಕ್ಕ ಹಾಗೆ ಮಗನನ್ನು ಆಶೀರ್ವದಿಸಿ ಯುದ್ಧಕ್ಕೆ ಹೋಗಲು ಒಪ್ಪಿಗೆ ನೀಡುತ್ತಾಳೆ. ಕಾಸೀಮನು ಮತ್ತೆ ಹುಸೇನ ಸಾಹೇಬರ ಬಳಿಗೆ ಬರುತ್ತಾನೆ.

"ನಿನ್ನ ತಂದೆಗೆ ನನ್ನ ಮಗಳಾದ ಸಕೀನಾಬಾನುವಿನೊಡನೆ ನಿನ್ನನ್ನು ಮದುವೆ ಮಾಡುವ ವಿಚಾರವಿತ್ತು. ಅವನ ಬಯಕೆಯಂತೆ ನೀನು ಸಕೀನಾಳನ್ನು ಮದುವೆಯಾಗಿ ಯುದ್ಧಕ್ಕೆ ಹೊರಡು" – ಎಂದು ಹುಸೇನರು ಹೇಳುತ್ತಾರೆ. ಯುದ್ಧ ಕಾಲದಂಥ ಗಂಭೀರ ಹಾಗೂ ಸಂಕೀರ್ಣ ಪರಿಸ್ಥಿತಿಯಲ್ಲಿ ಮದುವೆಯಂಥ ಮಂಗಳ ಕಾರ್ಯ ಬೇಡವೆಂದರೂ ತಾಯಿ ಮತ್ತು ಹುಸೇನರು ಕೇಳಲಿಲ್ಲ. ದುಃಖಭರಿತ ಸನ್ನಿವೇಶದಲ್ಲಿ ಮದುವೆ ನಡೆಯಿತು. ಭಾಗವಹಿಸಿದ ಯಾರ ಮುಖದಲ್ಲೂ ನಗುವಿನ ಕಳೆಯಿರಲಿಲ್ಲ. ವೀರ ಕಾಸೀಮ ಹದಿನಾರರ ಮುಗ್ಧ ಕಿಶೋರನಾಗಿದ್ದ. ತನ್ನ ಹೆಂಡತಿ ಸಕೀನಾಳ ಮುಖ ನೋಡಿ ನಾಲ್ಕು ಪ್ರೀತಿಯ ಮಾತುಗಳನ್ನಾಡಲು ಅವಕಾಶವಿರಲಿಲ್ಲ. ಅವನು ಹಸಿಮೈಯಲ್ಲಿಯೇ ಭಾರವಾದ ಹೆಜ್ಜೆಹಾಕುತ್ತಾ ಯುದ್ಧಕ್ಕೆ ನಡೆಯುತ್ತಾನೆ.

ಯುದ್ಧದಲ್ಲಿ ಮರಿಸಿಂಹದಂತೆ ಹೋರಾಡಿದ ಕಾಸೀಮ ತನ್ನ ಪರಾಕ್ರಮ ಪ್ರದರ್ಶಿಸುತ್ತಾನೆ. ಒಂದು ಮೊಲಕ್ಕೆ ಹತ್ತು ನಾಯಿಗಳು ಬೆನ್ನಟ್ಟಿದಂತೆ ಶತ್ರುಗಳು ಕಾಸೀಮನ ಮೇಲೆ ಬೀಳುತ್ತಾರೆ. ಬಾಣಗಳ ಮಳೆ ಸುರಿಸುತ್ತಾರೆ. ಬಾಲಕ ಕಾಸೀಮ ಹೌಹಾರುತ್ತಾನೆ. ಗಾಯಗಳಿಂದ ಜರ್ಝರಿತನಾದ ಅವನನ್ನು ಕುದುರೆ ಸಂದರ್ಭವನ್ನರಿತು ಪಾಳೆಯಕ್ಕೆ

ತಂದು ಮುಟ್ಟಿಸುತ್ತದೆ. ಹುಸೇನರ ಪಾಳೆಯದಲ್ಲಿ ದುಃಖ ಮಡುವುಗಟ್ಟುತ್ತದೆ. ಒಮ್ಮೆಲೆ ಅಳುವ ದನಿ ತಾರಕಕ್ಕೇರುತ್ತದೆ. ತಾಯಿ ಹಾಗೂ ಸತಿಯರೆಲ್ಲ ಎದೆ ಬಡಿದುಕೊಂಡು ದುಃಖಿಸುತ್ತಾರೆ. ಇಡಿ ಪಾಳೆಯ ಶೋಕಸಾಗರದಲ್ಲಿ ಮುಳುಗುತ್ತದೆ. ಕರ್ಬಲಾ ಬಯಲು ಕಳಾಹೀನವಾಗುತ್ತದೆ. ವೀರ ಬಾಲಕ ಶೌರ್ಯವನ್ನು ಮೆರೆದು ಸ್ವರ್ಗವಾಸಿಯಾಗುತ್ತಾನೆ.

'ವೀರಪಥಿಕ' ದ ಮೊದಲ ಭಾಗ 'ಭಾವದಲ್ಲಿ' ಧೂಲಾ ಸಾಹೇಬರ ಸಾಧನೆಯ ಕತೆ ಹೇಳಲ್ಪಟ್ಟಿದೆ :

ಅಸಮ ಆಶಾಪಾಶಾ ಹರಿದುಬಿಟ್ಟೆ
ವಿಷಯ ವಾಸನೆಗಳನು ಸುಟ್ಟುಬಿಟ್ಟೆ
ಈಶಕೋಪದ ಕತೆಯ ಬಲ್ಲೆ ನಾನು
ಈಶ ಕರುಣೆಯ ಮಹಿಮೆ ಅರಿತೆ ನಾನು

ಹೀಗೆ ದ್ವಿಪದಿಯಲ್ಲಿ ರಚನೆಗೊಂಡ ಖಂಡಕಾವ್ಯ ಸುಂದರ ಪದಗಳಿಂದ ಶೋಭಿತವಾಗಿದೆ. ಆದಿ ಅಂತ್ಯ ಪ್ರಾಸಗಳು ಕಾವ್ಯದುದ್ದಕ್ಕೂ ತಾಳಗತಿಗಳಿಗೆ ಮೆರಗುನೀಡಿವೆ.

ಕವಿಯು ಸ್ವಗತ ಗೀತವನ್ನು ಹಾಡುತ್ತ ಆತ್ಮಶೋಧನೆಯನ್ನು ಮಾಡಿಕೊಳ್ಳುತ್ತಾನೆ. ಭಾರತೀಯ ಸನಾತನ ವೇದಾಂತ ಪರಂಪರೆಯಲ್ಲಿ ನಡೆದು ಸಾಧನೆಯ ನಿಲುವುಗಳನ್ನು ಧೂಲಾ ಅವರು ಹೇಳಿಕೊಳ್ಳುತ್ತಿರುವುದು ನಿಚ್ಚಳವಾಗಿದೆ. ವೀರ ಕಾಸೀಮನಿಗೆ ಈ ರೀತಿಯ ಉದಾತ್ತ ಮೌಲ್ಯಾಧಾರಿತ ಸಂಸ್ಕಾರ ದೊರೆತಿತ್ತೋ ಇಲ್ಲವೋ ಗೊತ್ತಿಲ್ಲ. 'ವೀರಪಥಿಕ' ನಿಗೆ ಮಾತ್ರ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ

ಉನ್ನತ ಸ್ಥಾನ ದೊರಕಿದೆ. ಹೀಗಾಗಿ ಅರೇಬಿಯದ ವೀರ ಕಾಸೀಮ ಭಾರತೀಯ ಸಾಹಿತ್ಯಾಸಕ್ತರ ಮನದಲ್ಲಿ ನೆಲೆಯೂರುತ್ತಾನೆ.

'ಅರಬಿಯ ಅಭಿಮನ್ಯು' ನೀಳ್ಗವಿತೆಯ ದ್ವಿತೀಯ ವಿಭಾಗ 'ರಣದಲ್ಲಿ' ಎಂಬ ಭಾಗವು ಶೌರ್ಯ ಪ್ರದರ್ಶನ ಮತ್ತು ವೀರಮರಣವನ್ನಪ್ಪುವ ವೀರ ಹಾಗೂ ಕರುಣ ರಸಗಳ ಗೂಡಾಗಿದೆ. ಧರ್ಮ ಪರಿಪಾಲನೆ, ಸತ್ಯರಕ್ಷಣೆ, ನಾಡಸೇವೆ ಮತ್ತು ಕರ್ತವ್ಯ ನಿಷ್ಠೆಗಳಂಥ ಉದಾತ್ತ ಮೌಲ್ಯಗಳ ಪ್ರಸ್ತಾಪವಿದೆ.

ಕರ್ಬಲಾದಲ್ಲಿ ನಡೆದ ಧರ್ಮಯುದ್ಧದಲ್ಲಿ ತಮ್ಮ ಪಡೆಗೆ ಆಗುತ್ತಿರುವ ಹೀನಾಯ ಸೋಲನ್ನು ಕಂಡ ಕುಮಾರ ಕಾಸೀಮನ ಮನಸ್ಸು ಆಘಾತಕ್ಕೆ ಒಳಗಾಗುತ್ತದೆ. ಅವನ ಆತ್ಮಾಭಿಮಾನ ಕೆರಳುತ್ತದೆ:

ಮುಗಿಲೆಲ್ಲ ಔದಾಸ್ಯ ಮುಚ್ಚಿರುವುದು
ಹಗಲೆಲ್ಲ ಕಣ್ಣೀರು ಹರಿಯುತಿಹುದು
ಧ್ವನಿಯಲ್ಲಿ ಹಾಕಾರ ತುಂಬಿರುವುದು
ಮನೆಮನೆಗೆ ಅಳುವ ಸ್ವರ ಕೇಳುತಿಹುದು.

ಕರ್ಬಲಾದಲ್ಲಿ ಚಿಕ್ಕಪ್ಪ ಹುಸೇನರ ಪಡೆ ಹಾಗೂ ಏಜಿದನ ಪಡೆಯ ನಡುವೆ ನಡೆದ ಘನಘೋರ ಯುದ್ಧದ ಗಂಭೀರ ಸನ್ನಿವೇಶದ ಚಿತ್ರಣವನ್ನು ಮನಮುಟ್ಟುವಂತೆ ವಿವರಿಸಿದ್ದಾರೆ. ಯುದ್ಧದಲ್ಲಿ ದಯೆಗೆ ಸ್ಥಾನವಿಲ್ಲ. ಅಲ್ಲಿ ಅಧರ್ಮ ಅನ್ಯಾಯಗಳದೆ ದರ್ಬಾರು. ಮರಣ ಸತ್ಯ ಧರ್ಮಗಳ ಮೇಲೆ ಸವಾರಿ ಮಾಡುತ್ತದೆ. ಇವೆಲ್ಲವೂ ವೀರ ಕಾಸೀಮನ ನಿಷ್ಕಳಂಕ ಮುಗ್ಧ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ. ಕಾಸೀಮ ತಾಯಿಯ ಬಳಿಗೆ ಹೋಗಿ ಯುದ್ಧಕ್ಕೆ ಹೋಗಲು ಅನುಮತಿಯನ್ನು ಬೇಡುತ್ತಾನೆ.

ಆಗ ತಾಯಿ-ಮಗನ ಮಧ್ಯದಲ್ಲಿ ನಡೆದ ಸಂಭಾಷಣೆಯ ನಾಟಕೀಯ ದೃಶ್ಯ ಓದುಗರ ಮನ ಮಿಡಿಯುತ್ತದೆ.

ತಾಯಿ – ಬಾ ತಾರೆ ! ಬಾ ಚಂದ್ರ ! ಬಾರೆನ್ನ ರನ್ನಾ !
ಏತಕ್ಕೆ ಪೇಳು ಗಡ ನಿನ್ನ ಈ ಮೌನ
ಅರಮನೆಯ ಸಿರಿಗೂಸೇ ನೀರಿನಲ್ಲಿ
ವೈರಿಗಳು ಬೆರೆಸಿಹರು ವಿಷವನಿಲ್ಲಿ

ಮಗು – ಉಮ್ಮಳಿಸಿ ಹೊರಚಿಮ್ಮಿತೊಂದು ನುಡಿಯು
ಅಮ್ಮ! ಎನಗಾಜ್ಞೆಕೊಡು ಬೇಡ ತಡೆಯು
ಧರ್ಮ ಪಾಲನೆಯ ನಿಜ ಧ್ಯೇಯವಿಹುದು
ಕರ್ಮಹೀನತೆ ನರಗೆ ತ್ಯಾಜ್ಯವಿಹುದು.

ಕಾಸೀಮನು ತನ್ನ ಆಯುಷ್ಯ ಹೆಚ್ಚಾಗುವಂತೆ ಆಶೀರ್ವದಿಸಲು ವಿನಂತಿಸುತ್ತಾನೆ. 'ಹರಸವ್ವ! ಆಯುಷ್ಯ ಬೆಳೆಯಲೆಂದು' ಎಂಬ ಉಕ್ತಿಯು ಧ್ವನಿ ಪೂರ್ಣವಾಗಿದೆ. ಆಯುಷ್ಯ ಬೆಳೆಯಬೇಕಾದರೆ ಯುದ್ಧದಲ್ಲಿ ಜಯ ಸಂಪಾದಿಸಲೇಬೇಕೆಂಬ ವ್ಯಂಜನಾರ್ಥ ಸೊಗಸಾಗಿ ಮೂಡಿದೆ.

ಹೆತ್ತ ಕರುಳಿಗೆ ಮಗನನ್ನು ಯುದ್ಧಕ್ಕೆ ಕಳಿಸಿಕೊಡಲು ಮನಸ್ಸಿಲ್ಲ. ಆದರೆ ಕಳಿಸಿಕೊಡದೆ ಗತ್ಯಂತರವಿಲ್ಲ. ಉಭಯ ಸಂಕಟದಲ್ಲಿ ಸಿಕ್ಕು ನೊಂದುಕೊಳ್ಳುತ್ತಾಳೆ. ಧರ್ಮಪಾಲನೆ ಹಾಗೂ ಸತ್ಯರಕ್ಷಣೆಗಾಗಿ ಯುದ್ಧಕ್ಕೆ ಹೋಗಲು ಮಗನಿಗೆ ಒಪ್ಪಿಗೆ ನೀಡುತ್ತಾಳೆ. ಧರ್ಮೋ ರಕ್ಷತಿ ರಕ್ಷಿತಃ. ಧರ್ಮ ರಕ್ಷಣೆಗೆ, ನಾಡಿನ ಸೇವೆಗೆ ಈ ಜೀವ ಮುಡಿಪಾಗಲೆಂದು ಮಗನನ್ನು ರಣದೇವಿಯುಡಿಗೆ ಹಾಕುತ್ತಾಳೆ. ಇಲ್ಲಿ ಮಾತೃವಾತ್ಸಲ್ಯಕ್ಕಿಂತ ಕರ್ತವ್ಯ ಪಾಲನೆಯೆ ಮುಖ್ಯವೆಂಬ ಸಂದೇಶವಿದೆ. ಯುದ್ಧದಲ್ಲಿ

ವೈರಿಗಳನ್ನು ಹಿಮ್ಮೆಟ್ಟಿ ಜಯಸಾಧಿಸಿ ಬಂದು ಮುಖತೋರಲು ಹೇಳುತ್ತಾಳೆ.

ಮಹಾಭಾರತದ ಅಭಿಮನ್ಯು ಹಾಗೂ ಅರಬಿಯದ ವೀರ ಕಾಸೀಮುರ ಬದುಕಿನ ಕಥೆಯಲ್ಲಿ ಸಾಮ್ಯತೆಯಿದೆ. ಇಲ್ಲಿ ಧೂಲಾಸಾಹೇಬರು ಮಹಮ್ಮದೀಯ ಐತಿಹಾಸಿಕ ಸಂದರ್ಭವನ್ನು ಭಾರತೀಯ ಸಂಸ್ಕೃತಿ ಹಾಗೂ ಸಂಪ್ರದಾಯಗಳ ನೆಲೆಗಟ್ಟಿನ ಮೇಲೆ ಕಟ್ಟಿ ನಿಲ್ಲಿಸಿ ಭಾವೈಕ್ಯತೆಯ ಮೆರಗುನೀಡಿದ್ದಾರೆ.

ಕವಿ ಪಿ.ಧೂಲಾರವರು ಉನ್ನತ ಶಿಕ್ಷಣ ಪಡೆದವರಲ್ಲ. ವಿಮರ್ಶಾತ್ಮಕ ಸಾಹಿತ್ಯ ಗ್ರಂಥಗಳ ಅಧ್ಯಯನ ಮಾಡಿದವರಲ್ಲ. ಆದರೂ ಶ್ರೇಷ್ಠ ಬರಹಗಾರರಿಗಿಂತ ಇವರ ಕವಿತೆಗಳ ಸತ್ವ ಕಡಿಮೆಯೇನಲ್ಲ.

'ವೀರಪಥಿಕ' ಕಾವ್ಯದಲ್ಲಿ ಕಂದ ಹಾಗೂ ರಗಳೆಯ ಬಂಧವಿದೆ. ಆಯ್ಕೆಯಾದ ಶಬ್ದಗಳು ಮಾತ್ರಾಗಣಕ್ಕನುಗುಣವಾಗಿವೆ. ಪ್ರಾಸಿಗೆ ಪ್ರಾಸವನ್ನು ಹೊಂದಿಸದೆ ತ್ರಾಸವಿಲ್ಲದ ಸಹಜ ಪ್ರಾಸಗಳನ್ನು ಸಂದರ್ಭೋಚಿತವಾಗಿ ತರಲಾಗಿದೆ.

ಪ್ರಕೃತಿ ವರ್ಣನೆ, ತತ್ವ ಚಿಂತನೆ ಹಾಗೂ ಭಾವ ಪ್ರೇರಣೆಗಳು ಕಾವ್ಯತ್ವ ಶಕ್ತಿಗೆ ಪುಷ್ಠಿ ನೀಡಿವೆ. ಪಿ. ಧೂಲಾರವರಿಗೆ ಛಂದಸ್ಸಿನ ಆಳಜ್ಞಾನವಿದ್ದ ಹಾಗೆ ಕಾಣುತ್ತದೆ. ಇದಿಗೆ ಎಪ್ಪತ್ತು ವರ್ಷಗಳ ಹಿಂದೆಯೇ ಪ್ರಕಟಗೊಂಡ ನವೋದಯ ಪರಂಪರೆಗೆ ಸಂಬಂಧಿಸಿದ ಕೆಲವೇ ಉತ್ತಮ ಕೃತಿಗಳಲ್ಲಿ ಧೂಲಾಸಾಹೇಬರ 'ವೀರ ಪಥಿಕ'ವೂ ಒಂದಾಗಿದೆಯೆಂದು ಹೇಳಬಹುದು. 'ವೀರ ಪಥಿಕ' ವಿಮರ್ಶಕರ ದೃಷ್ಟಿಗೆ ಬೀಳದಿರುವುದು ಸೋಜಿಗವಾಗಿದೆ. ಪಿ. ಧೂಲಾ ಅವರು ನವೋದಯ ಕಾಲದ

ಸಾಹಿತಿಗಳ ಸಾಲಿನಲ್ಲಿ ಗಟ್ಟಿ ನೆಲೆಹೊಂದಿದ್ದಾರೆಂದರೆ ಅತಿಶಯೋಕ್ತಿಯ ಮಾತಾಗುವುದಿಲ್ಲ.

ಜೀವನ ಸಂಗೀತ

ಧೂಲಾ ಸಾಹೇಬರು ಹಾಗೂ ಸಿಂಪಿ ಲಿಂಗಣ್ಣನವರು ಕೂಡಿ 1933ರಲ್ಲಿ 'ಜೀವನ ಸಂಗೀತ' ಎಂಬ ಲಾವಣಿಗಳನ್ನು ಸಂಗ್ರಹಿಸಿ ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ. ಇದು ಪಿ. ಧೂಲಾರವರ ಮಹತ್ವದ ಕೊಡುಗೆ. ಹಲಸಂಗಿ ಖಾಜಾ ಸಾಹೇಬರ ಲಾವಣಿಗಳನ್ನು ಹಾಡಿ ಪ್ರಚಾರಗೊಳಿಸುತ್ತಿದ್ದ ಓಲೇಕಾರ ರಾಮಚಂದ್ರನು ಪಿ. ಧೂಲಾರ ಪ್ರೀತಿಯ ಕಿರಿಯ ಸಮಕಾಲೀನನಾಗಿದ್ದನು. ಸಿಂಪಿ ಲಿಂಗಣ್ಣ, ಪಿ. ಧೂಲಾಸಾಹೇಬರು ಹಾಗೂ ರಾಮಚಂದ್ರ ಇವರೆಲ್ಲ ಸೇರಿ ಲಾವಣಿಗಳನ್ನು ಸಂಗ್ರಹಿಸಿದರು. ಜೀವನ ಸಂಗೀತ ಕನ್ನಡದ ಮೊದಲ ಲಾವಣಿ ಸಂಗ್ರಹ.

ಜೀವನ ಸಂಗೀತದಲ್ಲಿ ಒಟ್ಟು ಏಳು ಜನ ಲಾವಣಿಕಾರರ ಒಟ್ಟು ಹದಿನಾಲ್ಕು ಲಾವಣಿಗಳಿವೆ. ಅವುಗಳಲ್ಲಿ ಹನ್ನೆರಡು ದೀರ್ಘಲಾವಣಿಗಳು. ಉಳಿದೆರಡರಲ್ಲಿ ಒಂದು ಸಖಿ, ಇನ್ನೊಂದು ಖ್ಯಾಲಿ. ಏಳು ಜನ ಲಾವಣಿಕಾರರಲ್ಲಿ ಖಾಜಾ ಸಾಹೇಬರು ಪ್ರಮುಖರಾದವರು. ಉಳಿದವರು ರಾಣು-ಕುಬ್ಬಣ್ಣ, ಸಂಗಣ್ಣ, ನಾನಾ ಸಾಬ, ನ್ಯಾಮಣ್ಣ, ಶಿವಲಿಂಗ, ಗೋಪಾಲ ದುರದುಂಡಿ, ಸಿದ್ದು-ಶಿವಲಿಂಗರಾಗಿದ್ದಾರೆ. ಇವರೆಲ್ಲ ನಿರಕ್ಷರಿಗಳಾದರೂ ಹಾಡುಕಟ್ಟುವುದರಲ್ಲಿ ನಿಪುಣರು.

ಖಾಜಾಭಾಯಿಯವರ ಅಸಲಜಾತ ಹೆಣ್ಣು, ಸಂಪಿಗೆ ತೆನಿಯಂಥ ಹುಡುಗ, ಚಂದ್ರುಣಿ ಹಾಗೂ ಕರಿಹುಡುಗಿ ಎಂಬ ನಾಲ್ಕು ಲಾವಣಿಗಳಿವೆ.

ಅದೇ ತೆರನಾಗಿ ರಾಣು-ಕುಬ್ಬಣ್ಣರ 'ವತ್ಸಲಾಹರಣ', ಸಂಗಣ್ಣನ 'ಗೋಕುಲಾಷ್ಟಮಿ', ನಾನಾಸಾಹೇಬನ 'ಬಸಿರಿದ್ದಿನ್ಹೆಸರಿನ್ನೇನಿಡೂನ', ನ್ಯಾಮಣ್ಣನ 'ನಾಗರ ಪಂಚಮಿ', ಶಿವಲಿಂಗನ 'ಕೃಷ್ಣಲೀಲೆ', ಗೋಪಾಲ ದುರದುಂಡಿಯ 'ಅಷ್ಟೂರ ಮಾತಿದು' ಮತ್ತು ಸಿದ್ದು-ಶಿವಲಿಂಗರ 'ಗಿಡ್ಡಮೋರಿ' ಮತ್ತು 'ಭೀಷ್ಮಪರ್ವ'ಗಳು ಜೀವನ ಸಂಗೀತದಲ್ಲಿವೆ. ಶೃಂಗಾರವೇ ಇಲ್ಲಿಯ ಲಾವಣಿಗಳ ಜೀವಾಳವಾಗಿದೆ.

ಹೆಣ್ಣಸಲಜಾತ ಪದ್ಮಿನೀ । ಸುರತ ಚಂದ್ರಣೀ ।
ಹೊಂಟೆ ನಾಗಿಣೀ । ನೋಡ ತಿರುಗೀ ।
ಮರಿಗುದರಿ ಕುಣಿಸಿದಂಗ ನಾಜೂಕ ನಿನ್ನ ನಡಿಗಿ ।
ಹೊಳಿ ನೀರ ಥೆರಿಯ ಹೊಡಿದಂಗ ಒದುತೆ ನಿಲಗೀ ॥

ಖಾಜಾ ಸಾಹೇಬರು ಅಲ್ಲಲ್ಲಿ ಉಪಮೇಯಗಳನ್ನು ಬಳಸಿ ಅಸಲಜಾತ ಹೆಣ್ಣಿನ ವರ್ಣನೆಯನ್ನು ರಸವತ್ತಾಗಿ ಹೇಳಿದ್ದಾರೆ.

ಖಾಜಾಭಾಯಿ ಅವರ ಇನ್ನೊಂದು ಲಾವಣಿ 'ಕರೀ ಹುಡುಗಿ' ಕವಿಯ ನೈಜ ಪ್ರತಿಭೆಯನ್ನು ಬಿಂಬಿಸುತ್ತದೆ :

ನೀ ಬಾರ ಕರ್‍ರನ ಕರೀ ಹುಡುಗಿ । ಕರೀ ಉಡಿಗಿ ।
ನವಿಲಿನಾಂಗ ನಡಿಗಿ ನಡುತೆ ಸವನಾ ।
ಕರಿ ಕೂದಲ ಬೇತಲಿ ತೀಡಿ ತೆಗೆವ ಸಣ್ಣ ।
ಕರಿ ಹುಬ್ಬ ಕೊರೆದಂಗ ಕರಿಕಾಡಿಗಿಗಣ್ಣ ।
ಏನು ಹೇಳಲಿ ನಾರಿ ನಿನ್ನ ಕಪ್ಪ । ಎಂಥ ನಿನ್ನ ರೂಪ ।
ಆಯಿತ ನೆಪ್ಪ ನೀಲದ್ಹಣ್ಣ ॥

ಖಾಜಾಭಾಯಿ ಅವರು ಆದಿ ಅಂತ್ಯ ಪ್ರಾಸಗಳ ಜೊತೆಗೆ ಒಳಪ್ರಾಸುಗಳನ್ನು ಜೋಡಿಸಿದ ರೀತಿ ಮೆಚ್ಚುಗೆಗೆ ಪಾತ್ರವಾಗಿದೆ.

ಮೇಲಿನ ನುಡಿಯಲ್ಲಿ ಉಪಯೋಗಿಸಿಕೊಂಡ ಹುಡುಗಿ, ಉಡಿಗಿ, ನಡಿಗಿ, ನಡುತೆ, ತೀಡಿ, ಕಾಡಿಗೆ ಪದಗಳಲ್ಲಿರುವ ಡಕಾರದ ಠೇಂಕಾರ ಮನಸೆಳೆಯುತ್ತದೆ.

ಈ ಸಂಗ್ರಹದ ಆದಿ ಅಂತ್ಯದಲ್ಲಿ ಖಾಜಾಸಾಹೇಬರ ಎರಡು ಚಿಕ್ಕ ಲಾವಣಿಗಳನ್ನು ಬಳಸಿಕೊಂಡಿದೆ. ಯಾವುದೆ ಸಭೆ, ಸಮಾರಂಭ, ಉತ್ಸವ, ಹೊಸ ಕಾರ್ಯಗಳು ಸಾಮಾನ್ಯವಾಗಿ ದೇವರ ಸ್ತುತಿ ಇಲ್ಲವೆ ಗುರುವಿನ ಸ್ಮರಣೆಯಿಂದ ಪ್ರಾರಂಭವಾಗುತ್ತವೆ. ಇದು ಭಾರತೀಯ ಸಂಪ್ರದಾಯ.

ಗುರುವೆ ನಿಮ್ಮ ಪಾದಕ ಬೆರಸಿ
ಪೂಜಿ ಮಾಡುವೆ ಸಾಹಿತ ತರಿಸಿ
ತೀರ್ಥ ಸೀತಾಳದಿಂದ ಪಾದ ತೊಳಸಿ
ಅಬಿರ ಕಸ್ತೂರಿ ಅಂಗಕ ಧರಿಸಿ
ಜಾಜಿ ಪುಷ್ಪ ಮಲ್ಲಿಗೆ ಏರಿಸಿ.

ಗುರುವನ್ನು ಪ್ರಾರ್ಥಿಸುವ 'ಪ್ರಾರ್ಥನಾ' ಹಾಡು ಪೂಜೆಯ ವಿಧಿ ವಿಧಾನಗಳನ್ನು ವಿವರಿಸುತ್ತದೆ. ಈ ಮಂಗಳಕರ ಪ್ರಾರ್ಥನೆಯಿಂದ ಲಾವಣಿ ಹಾಡಿಕೆಯು ಯಾವ ವಿಘ್ನ-ಭಗ್ನಗಳಿಲ್ಲದೆ ಸುಸೂತ್ರವಾಗಿ ಜರುಗುತ್ತದೆಯೆಂದು ನಂಬಿಕೆ.

'ಜೀವನ ಸಂಗೀತ' ಸಂಗ್ರಹದ ಕೊನೆಯಲ್ಲಿ ಖಾಜಾ ಅವರ 'ನಿನ್ನ ಹೊರತು ದೇವರೇ ಇಲ್ಲ' – ಎಂಬ ಖ್ಯಾಲಿಯನ್ನು ಸೇರಿಸಿದೆ. ದೇವನೊಬ್ಬ ನಾಮ ಹಲವು. ಏಕದೇವೋಪಾಸನೆಯ ಬಗ್ಗೆ ಧರ್ಮಪುರುಷರು ಹೇಳುತ್ತಲೇ ಬಂದಿದ್ದಾರೆ. ಆದರೆ ಮೂಢ ಆಚರಣೆಗಳು ಮಾತ್ರ ಅವ್ಯಾಹತವಾಗಿ ನಡೆದುಕೊಂಡು ಬಂದಿವೆ.

ಇದನ್ನೇ ಖಾಜಾಭಾಯಿ ಜನಸಾಮಾನ್ಯರಿಗೆ ಮನದಟ್ಟಾಗುವಂತೆ ತಿಳಿತಿಳಿಯಾಗಿ, ತೊಳಿತೊಳಿಯಾಗಿ ಬಿಡಿಸಿಟ್ಟಿದ್ದಾರೆ:

ಸೋಹಂ ಶಿವನೇ ನಿನ್ನ ಹೊರತು ದೇವರೇ ಇಲ್ಲ ॥
ನಿನ್ನ ಬಿಟ್ಟು ಯಾವ ದೇವರು ಇಲ್ಲ ।
ಕಲ್ಲು ಮಣ್ಣು ಕಟಿಗೀವೇ ಇಲ್ಲ ।
ಜನನ ಮರಣ ನಿನಗೆರಡೂ ಇಲ್ಲ ।
ತಾಯಿ ತಂದೆ ನಿನಗ್ಯಾರ‍್ಯಾರಿಲ್ಲ ।
ನಿನಗ್ಯಾರು ಹಡದಿಲ್ಲ ।

ಗುಡಿ ಗುಂಡಾರ – ಮಂದಿರಗಳಲ್ಲಿರುವ ಮೂರ್ತಿಗಳು ದೇವರಲ್ಲ. ಜನನ–ಮರಣ ರಹಿತನಾದ ದೇವರು ಅಗಮ್ಯ, ಅಗೋಚರ, ಅಪ್ರತಿಮನಾಗಿರುವನೆಂದು ಮಾರ್ಮಿಕವಾಗಿ ಹೇಳಿದ್ದಾರೆ. ಖಾಜಾ ಸಾಹೇಬರು ಒಬ್ಬ ಅಪ್ರತಿಮ ಗಾಯಕರಾಗಿದ್ದರೆಂದು ಅವರ ಕಲ್ಪನಾ ಶಕ್ತಿ ಹಾಗೂ ಹಾಡುಕಟ್ಟುವ ಶೈಲಿ ಪಿ. ಧೂಲಾಸಾಹೇಬರ ಮೇಲೆ ಗಾಢ ಪರಿಣಾಮ ಬೀರಿತ್ತೆಂದು ತಿಳಿದುಬರುತ್ತದೆ.

ರಾಣು–ಕುಬ್ಬಣ್ಣ ವಿರಚಿತ 'ವತ್ಸಲಾ ಹರಣ' ಎಂಬ ಲಾವಣಿ ಮಹಾಭಾರತ ಕಥೆಗೆ ಸಂಬಂಧಿಸಿದೆ.

ಕಥೆಯುದ್ದಕ್ಕೂ ಶೃಂಗಾರ, ವೀರ, ಕರುಣ ಹಾಗೂ ಹಾಸ್ಯ ರಸಗಳು ತಮ್ಮತನವನ್ನು ಮೆರೆಯುತ್ತವೆ. ಕೇಳುಗರ ಹೃದಯವನ್ನು ಮುಟ್ಟಿದ ರಸಗಂಗೆ ಆನಂದ ತುಂದಿಲರನ್ನಾಗಿ ಮಾಡುತ್ತದೆ. ಇಲ್ಲಿ ಬೆಡಗಿನ ಗ್ರಾಮ್ಯ ಪದಗಳು ಯಥೇಚ್ಛವಾಗಿ ಬಳಕೆಯಾಗಿವೆ. ಇಲ್ಲಿ ಕುಬ್ಬಣ್ಣನವರ ಕಥೆಗಾರಿಕೆಯಲ್ಲಿನ ಔಚಿತ್ಯ ಗುಣದ ವಿಶೇಷತೆಯನ್ನು ಕಾಣಬಹುದು.

ಸಂಗಣ್ಣನ 'ಗೋಕುಲಾಷ್ಟಮಿ' ಲಾವಣಿಯು ಸಂಪೂರ್ಣ ಕೃಷ್ಣಮಯವಾಗಿದೆ. ಕಿಡಗೇಡಿ ಕೃಷ್ಣ ಬೆಣ್ಣೆ ಕದ್ದು, ಮೊಸರು ಚೆಲ್ಲಿ, ಗೋಪಿಕೆಯರ ಪಿತಾಂಬರ ಸೆಳೆದು, ಮೈಮುಟ್ಟಿ ಎಳೆದು, ಅವರನ್ನು ಕಾಡಿಸಿ–ಪೀಡಿಸಿದ ಸನ್ನಿವೇಶ ರಸಿಕರ ಮನವನ್ನು ಮುಟ್ಟುತ್ತದೆ. ಸತ್ಯಭಾಮೆ–ರುಕ್ಮಿಣಿ, ಗೋಪಿಕೆಯರೆಲ್ಲ ಸೇರಿ ಇಂಧ್ರವನದಲ್ಲೂ ಹುಡುಕುತ್ತಾರೆ. ಈ ಸುದ್ದಿ ತಾಯ ಯಶೋದಳವರೆಗೂ ಹೋಗುತ್ತದೆ. ಅವತಾರಿ ಪುರುಷ ಕೃಷ್ಣ ಯಾರ ಕೈಗೂ ಸಿಗದೆ ಎಲ್ಲರನ್ನೂ ಸತಾಯಿಸುವ ಚಿತ್ರ ರಂಜನೀಯವಾಗಿದೆ.

ಬಹುತೇಕ ಲಾವಣಿಗಳಲ್ಲಿ ರಾಮಾಯಣ, ಮಹಾಭಾರತ ಇಲ್ಲವೆ ಆಧ್ಯಾತ್ಮ–ನೀತಿ ಬೋಧೆಯೇ ತುಂಬಿರುತ್ತದೆ. ಊಟದಲ್ಲಿ ಉಪ್ಪಿನ ಕಾಯಿಯನ್ನು ಆಸ್ವಾದಿಸುವಂತೆ ಮಧ್ಯದಲ್ಲಿ ಹಾಸ್ಯದ ಹಾಡುಗಳನ್ನು ಹಾಡಿದರೆ ಸೊಗಸೆನಿಸುವುದಿಲ್ಲವೆ? ನಮ್ಮ ಲಾವಣೀಕಾರರಿಗೆ ಎಲ್ಲವೂ ಗೊತ್ತು. ಮನಸ್ಸನ್ನಾವರಿಸುವ ಬೇಸರಿಕೆ ಮತ್ತು ಗಂಭೀರತೆಯನ್ನು ಮರೆಮಾಚಲು ನಡುನಡುವೆ ನಗಿಸುವುದುಂಟು. ನಾನಾಸಾಹೇಬನು ರಚಿಸಿದ ಒಂದು ಹಾಸ್ಯ ಲಾವಣಿಯ ಶೀರ್ಷಿಕೆಯನ್ನು ಓದಿದಾಗಲೇ ನಗು ಬರುತ್ತದೆ.

ತೇರಳಾದ ನ್ಯಾಮಣ್ಣ ಕವಿ 'ನಾಗರ ಪಂಚಮಿ' ಎಂಬ ಲಾವಣಿಯನ್ನು ರಚಿಸಿದ್ದಾನೆ.

ಪಂಚಮಿಯ ಹಬ್ಬಕ್ಕೆ ತವರವರು ಕರೆಯಲು ಬಂದೇ ಬರುತ್ತಾರೆ ಎಂಬ ಭರವಸೆಯಲ್ಲಿ ಕಾತರದಿಂದ ಅಣ್ಣನ ದಾರಿ ಕಾಯುವ ತಂಗಿ ಉತ್ಸಾಹದ ಬುಗ್ಗೆಯಾಗಿರುತ್ತಾಳೆ.

ಮದುವೆಯಾಗಿ ಗಂಡನ ಮನೆ ಸೇರುವವರೆಗೆ ತಾನು ಗೆಳತಿಯರ ಜೊತೆಗೂಡಿ ಆಡಿದ, ನಲಿದ, ತುಂಟಾಟ ಮಾಡಿದ, ಹಬ್ಬ ಆಚರಿಸಿದ ಏನೆಲ್ಲವನ್ನು ಸ್ಮರಿಸುತ್ತಾ ತವರಿಗೆ ಹೋಗಲು ತುದಿಗಾಲ ಮೇಲೆ ನಿಲ್ಲುತ್ತಾಳೆ. ಹೆಣ್ಣಿಗೆ ಹೆಣ್ಣೇ ವೈರಿ ಎಂಬಂತೆ ಸೋದರತ್ತೆ, ಆಕೆ ಮಕ್ಕಳು, ಚಿಕ್ಕಮ್ಮ, ತಮ್ಮನ ಹೆಂಡತಿಯನ್ನು ಅಷ್ಟೇ ಏಕೆ ತಂದೆ-ತಾಯಿಯರನ್ನೂ ನಿಂದಿಸುತ್ತಾಳೆ. ಆದರೂ ತವರಿನ ಬಗ್ಗೆ ಅಕ್ಕರೆ, ಪಂಚಮಿ ಹಬ್ಬ ಕುರಿತು ಎಲ್ಲ ವಿವರಗಳನ್ನು ನೀಡಿದ್ದಾನೆ. ಕೊನೆಗೂ ಅಣ್ಣ ಬಂದು ಅವಳನ್ನು ಕರೆದುಕೊಂಡು ಹೋದಾಗ ಹಿಗ್ಗಿ ಹೀರೇಕಾಯಿಯಾಗುತ್ತಾಳೆ.

ನಾಗನಾಥ ಕವಿ ಬರೆದ ಲಾವಣಿಯನ್ನು ಗುಡು-ಬಾಳು ಸೇರಿ ಹಾಡಿದ ಬಗ್ಗೆ ಕೃಷ್ಣಲೀಲೆಯ ಕೊನೆಯಲ್ಲಿ ಉಲ್ಲೇಖಿಸಲ್ಪಟ್ಟಿದೆ:

ಹೊತ್ತು ಹಾಲ್ಮೊಸರ ಸೋರಿ । ಹಿಡಿದೆವೊ ಮಥುರಾ ದಾರಿ।
ಹಾದಿಕಟ್ಟಿ ಗಿರಿಧಾರಿ । ಕಾಡಿದಾ ಮುರಹರಿ । ಕೃಷ್ಣ ಬಿದ್ದ ಖ್ಯಾಲಕ।
ಗೋವಿಂದ ಬಾಲ ಮುಕುಂದ ಹಾಲ ಮೊಸರ ಚೆಲ್ಲಿದ ನೆಲಕ ।

ಗೋಪಿಕಾ ಸ್ತ್ರೀಯರನ್ನು ಕೃಷ್ಣ ಪರಿಪರಿಯಾಗಿ ಕಾಡಿದ ಬಗ್ಗೆ ಕವಿ ರಸವತ್ತಾಗಿ ಬಣ್ಣಿಸಿದ್ದಾನೆ.

'ಗೋಪಾಲ ದುರದುಂಡಿ'ಯ 'ಅಷ್ಟೂರ ಮಾತಿದು' ಎಂಬ ಲಾವಣಿ ಕಲಿಗಾಲದ ಮಹಿಮೆಯನ್ನು ಬಿಚ್ಚಿ ಹೇಳುತ್ತದೆ:

ಅಷ್ಟೂರ ಮಾತಿದು ನಿಷ್ಠೂರ ಹೇಳತೀನಿ
ಬಿಟ್ಟಿಲ್ಲ ತುಂಬೀತು ಜಗವೆಲ್ಲ ।
ಹೊಟ್ಟೆಯಂಥ ವೈರಿ ಯಾವುದಿಲ್ಲ
ರೊಟ್ಟಿಯಂಥ ಮೈತರು ಇಲ್ಲ ॥

ದುರದುಂಡಿಯವರು ಬಲು ನಿಷ್ಠೂರರಾಗಿ ಸಾಮಾಜಿಕ ಹುಳುಕುಗಳನ್ನು ಕದ್ದುಮುಚ್ಚಿ ಇಲ್ಲದೆ ಬಿಚ್ಚಿಹೇಳಲು ಹೊರಟಿದ್ದಾರೆ. ಸತ್ಯ, ಧರ್ಮ, ನ್ಯಾಯ-ನೀತಿಗಳು ಕಣ್ಮರೆಯಾಗುತ್ತಿವೆಯೆಂಬ ಭ್ರಮೆ ಕವಿಯನ್ನು ಕಾಡಿದೆ. ಹಿರಿಯರಿಗೆ ಗೌರವ ಕೊಡದಿರುವುದು, ಸುಶಿಕ್ಷಿತರೆನಿಸಿಕೊಂಡವರು ಲಂಚತಿನ್ನುವುದು, ಸೂಟುಬೂಟು ಹಾಕಿಕೊಂಡು ಡೌಲುಮಾಡುವುದು, ತಂದ ಸಾಲವನ್ನು ತೀರಿಸದಿರುವದು, ಮೈಮೇಲೆ ದೇವರು ಬರುವದು ಮುಂತಾದ ಕೆಲವು ಮೋಸಗಾರಿಕೆಯ ಅವ್ಯವಹಾರಗಳನ್ನು ನೇರವಾಗಿ ಚುಚ್ಚಿ, ವ್ಯಂಗ್ಯವಾಗಿ ಹೇಳಲಾಗಿದೆ.

ಸಿದ್ದು-ಶಿವಲಿಂಗರು ರಚಿಸಿ ಹಾಡಿದ ಲಾವಣಿ 'ಗಿಡ್ಡ ಪೋರಿ' ಲಾವಣಿಯ ಶೀರ್ಷಿಕೆಯೇ ಇದೊಂದು ಶೃಂಗಾರಮಯ ಲಾವಣಿಯೆಂದು ಸಾರಿ ಹೇಳುತ್ತದೆ. ಹರೆಯದ ಹೆಣ್ಣಿನ ದೇಹಮಾಟ, ಒನಪು-ಒಯ್ಯಾರ, ನಡಿಗೆ-ಉಡಿಗೆಗಳನ್ನು ಶೃಂಗಾರಮಯವಾಗಿ ಬಣ್ಣಿಸಲಾಗಿದೆ.

ಸಿದ್ದು-ಶಿವಲಿಂಗರ ಇನ್ನೊಂದು ಲಾವಣಿ ಭೀಷ್ಮ ಪರ್ವ. ಅದು ಮಹಾಭಾರತದ ಉಪ ಕಥೆ.

'ಜೀವನ ಸಂಗೀತ' 1971 ರಲ್ಲಿ ಪುನರ್ಮುದ್ರಣಗೊಂಡಾಗ ಹಿರಿಯ ಸಾಹಿತಿಗಳ ಅಪೇಕ್ಷೆಯಂತೆ ಅನುಬಂಧವನ್ನು ಸೇರಿಸಲಾಯಿತೆಂದು ಸಂಪಾದಕರು ಹೇಳಿಕೊಂಡಿದ್ದಾರೆ. ನಾಲ್ಕರಲ್ಲಿ 'ಅಪಸ್ವರ ಗಾಯಕ', 'ವೀರಭದ್ರ ದೇವರ ಘನ್ನ' ಎರಡು ಲಾವಣಿಗಳು ಖಾಜಾಭಾಯಿಯವರಿಗೆ ಸೇರಿವೆ.

ಅರೆಜ್ಞಾನಿ ಗಾಯಕನ ಮೇಲೆ ಒಂದು ಕಥೆಯನ್ನೇ ಸೃಷ್ಟಿಸಿ 'ಅಪಸ್ವರ ಗಾಯಕ' ಎಂಬ ಶೀರ್ಷಿಕೆ ನೀಡಿದ್ದಾರೆ.

ಅಪಸ್ವರದಲ್ಲಿ ಹಾಡಿದ ಗಾಯಕನ ಗಾಯನವನ್ನು ಕೇಳಿ ಬ್ರಹ್ಮರಾಕ್ಷಸಕ್ಕೆ ತಲೆಬೇನೆ ಶುರುಆಗುತ್ತದೆ. ಗಾಯನ ನಿಲ್ಲಿಸಿದರೆ ಬೇಕಾದ್ದನ್ನು ಕೊಡಲು ಭರವಸೆ ನೀಡುತ್ತದೆ. ಒಬ್ಬ ಸಾವುಕಾರನ ಹೆಂಡತಿಗೆ ತಾನು ಬಡಿದುಕೊಳ್ಳುವುದು, ಅಲ್ಲಿ ಗಾಯಕ ಬರುವುದು, ಅವನನ್ನು ನೋಡಿದಾಕ್ಷಣ ದೆವ್ವಬಿಟ್ಟು ಹೋಗುವುದು, ಇದರಿಂದ ಸಾವುಕಾರ ಕೈತುಂಬ ಹಣ ಕೊಡುತ್ತಾನೆಂದು ಬ್ರಹ್ಮರಾಕ್ಷಸ ಹೇಳಿತು. ರಾಕ್ಷಸ ಹೇಳಿದಂತೆ ಚಚೂತಪ್ಪದೆ ನಡೆದುಕೊಂಡ ಗಾಯಕನಿಗೆ ನೂರು ರೂಪಾಯಿ ಸಿಗುತ್ತದೆ. ಇದೇ ರೀತಿ ಡೋಂಗಿ ಗಾಯಕರು ದುಡ್ಡಿಗಾಗಿ ಗಾಯನ ಮಾಡುತ್ತಾರೆಂದು ಕತೆಯ ನೀತಿಯಾಗಿದೆ :

ಅಪಸ್ವರ ಗಾಯನದಿಂದ ।
ದೆವ್ವಾದರು ನಿಂದ್ರುದಿಲ್ಲ ಮುಂದ ।
ಸಭಾ ಹ್ಯಾಂಗ ಕೇಳಬೇಕೋ ಚಂದ ।
ತಾಳ ಬಿಟ್ಟು ಹಾಡಿದರ ದೋಷ ಆದ ಅದರಿಂದ.

ಇನ್ನೊಂದು ಲಾವಣಿ 'ವೀರಭದ್ರದೇವರ ಘುನ್ನ'.

ವೀರಭದ್ರ ವೀರ ರಣಶೂರ ಧೀರ ಶಂಕರನ ಪುತ್ರ ಕರ್ತ ।
ನಿಮ್ಮ ಸ್ತುತೀ ಮತೀ ಸದ್ಗತೀ ರತಿ ನನಗೊರವಾಗಿರಿ ತುರ್ತ ॥
ದಕ್ಷಬ್ರಹ್ಮ ಹಮ್ಮ ಇಟ್ಟ ಹೋಮ ನೇಮ ಸಾಂಬಾಗ ಸುಟ್ಟೆನೆಂದ ।
ಶಂಕರಾಹರ ಬಂತು ಬೆವರ ಧುಮರದಾಗ ಹುಟ್ಟಿ ಬಂದ ಕಂದ ॥
ಕಡಕಡಿಯ ಬತ್ತಿಸ ಹತಿಯಾರ ಜೋರ ಹಂಕಾಕದ ಹೆಚ್ಚಿಂದ ॥
ತಂದಿ ಹುಕುಮ ಗಿಕಮ ಕೊಟ್ಟ ರತಮ ಹತಮ ಇಂದ್ರ ದೈತ್ಯರಿ-
ಗ್ಹೊಡಿಯಂದ ॥

ವೀರಭದ್ರದೇವರ ಘುನ್ನ ಇದೊಂದು ಕೇಳುಗರನ್ನು ಬೆಚ್ಚಿಬೀಳಿಸಿ ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತದೆ. ಇಲ್ಲಿ ಕವಿ ಒಳಪ್ರಾಸಗಳ ಡಿಂಡಿಮವನ್ನು ಬಾರಿಸಿದ್ದಾರೆ. ಉದ್ದೇಶಪೂರ್ವಕವಾಗಿ ಪ್ರಾಸಿಗೆ ಪ್ರಾಸುಗಳನ್ನು ಹೊಸೆಯಲಾಗಿದೆ. ಶಿಶುಪ್ರಾಸಗಳಲ್ಲಿರುವಂತೆ ಇಲ್ಲಿ ಎಷ್ಟೋ ಪದಗಳಿಗೆ ಅರ್ಥವೇ ಇಲ್ಲ. ಹಾಡಿನುದ್ದಕ್ಕೂ ಅರ್ಥರಹಿತ ಪ್ರಾಸಗಳು ಕೇಳುಗರ ಗಮನ ಸೆಳೆದು ಕಟ್ಟಿಹಾಕುತ್ತವೆ.

ಸಂಖ ಗ್ರಾಮದ ಬಲಭೀಮನೆಂಬ ಲಾವಣಿಕಾರ 'ತುಂಟ ತುಂಟರಿಗೆ ಗಂಟು ಬಿದ್ದರ?' ಎಂಬ ಹಾಸ್ಯಮಯ ಲಾವಣಿ ರಚಿಸಿದ್ದಾನೆ:

ಬೀಗನ ಮನೆಗೆ ಬೀಗ ಹೋದನೋ
ಅಕ್ಕನ ಮಾತಾಡಿಸಿ ಬರಬೇಕಂತ ।
ತುಂಟ ತುಂಟರಿಗೆ ಗಂಟು ಬಿದ್ದರ
ಗರದಿ ಆಗತದ ಗಮ್ಮತಾ ॥

ಅಕ್ಕನ ಗಂಡ ಭಾಳ ಜೇನ ಇದ್ದನೋ
ಅವನಿಗಿಂತ ಹೇಣತೀ ನೀಗಳಾ ।
ಒಪ್ಪತ್ತ ಉಂಡವರು ಉಪ್ವಾಸ ಮಾಡತಿದ್ರು
ಎರಡ್ಹೊತ್ತ ಉಣತಿದ್ದಿಲ್ಲ ಕೂಳಾ ॥

ಜಿಪುಣಾಗ್ರೇಸರಾದ ಅಕ್ಕ-ಭಾವರಿಗೆ ಒಮ್ಮೆ ಹೋಳಿಗಿ ಉಣ್ಣುವ ತಲಬಾಯಿತು. ಹೂರಣಕ್ಕೆ ಹಾಕಿ ಮಾಡಿಯೂಬಿಟ್ಟರು. ಅವರ ದುರ್ದೈವ ಅಳಿಯ ಬಂದುಬಿಡಬೇಕೆ? ಅಳಿಯನನ್ನು ಹೊರದಬ್ಬಿ ಹೋಳಿಗೆ ಉಣ್ಣುವ ಸಂಚುಮಾಡುತ್ತಾರೆ. ತುಂಟ ಅಳಿಯನಿಗೆ ಎಲ್ಲಾ ಗೊತ್ತಾಯ್ತು. ಅವನು ಹೊರಗೆ ಹೋದ ಬಳಿಕ ಉಣ್ಣಲು ಅಣಿಯಾಗುತ್ತಾರೆ. ಕಣ್ಣು ಕಟ್ಟಿಕೊಂಡು ಒಬ್ಬರ ಬಾಯಿಗೆ ಮತ್ತೊಬ್ಬರು ತುತ್ತನಿಡುತ್ತ ಹೋಳಿಗೆ ಉಣ್ಣುವ ಹುಚ್ಚು ಆಸೆಗೆ ಒಳಗಾಗುತ್ತಾರೆ. ಗಂಡ ಹೆಂಡತಿಗೆ, ಹೆಂಡತಿ ಗಂಡನಿಗೆ ತುತ್ತು ಉಣ್ಣಿಸುವಾಗ ಅಳಿಯ ಮಧ್ಯಪ್ರವೇಶಿಸಿ ಎಲ್ಲ ಹೋಳಿಗೆಗಳನ್ನು ತಿಂದು ತೇಗುತ್ತಾನೆ. ಹೊಟ್ಟೆ ತುಂಬಿದ ಮೇಲೆ ಢರಿ ಬಿಟ್ಟಾಗ ಅವರಿಗೆ ಮೋಸ ಹೋದದ್ದು ಗೊತ್ತಾಗುತ್ತದೆ.

ನಗೆ ಹಬ್ಬದಲ್ಲಿ ಹೇಳಬಹುದಾದ ಹಾಸ್ಯಪ್ರಸಂಗ ಕೇಳುಗರ ಹೊಟ್ಟೆ ಹುಣ್ಣಾಗಿಸುವಂತೆ ನಗಿಸುತ್ತದೆ. ಕವಿ ಹೇಳಬೇಕಾದ್ದನ್ನು ನೇರವಾಗಿ ಸ್ಪಷ್ಟವಾಗಿ ಹೇಳಿದ್ದಾನೆ. ಭಾಷೆ ಶುದ್ಧವಾಗಿದೆ.

ಲಿಂಗ ಕವಿಯ 'ಆಕಳ ಲಾವಣಿ' ಅಹಿಂಸೆಯನ್ನು ಬೋಧಿಸುವ ಧರ್ಮ ನೀತಿಯನ್ನು ಎತ್ತಿ ಹಿಡಿಯುತ್ತದೆ.

ಹಸಿಹಾಲು ಕರೆವುದು । ಬಸವನ ಹೆರೆವುದು ।
ಕಸುವನು ತರುವುದು । ಹುಸಿಯಲ್ಲ ಗೋವಿನ ತಳಿಯೆ ॥
ಧಾನ್ಯ ಕಾಳು ಬೆಳೆಯಲು । ತನ್ನ ಹೋರಿ ಕುಡುವುದು ॥
ಘನ್ನ ರೋಗ ಕಳೆವುದು । ಅಣ್ಣ ಕೇಳ್ರಿ ಗೋವಿಗೆ ಬೆಲೆಯೆ ॥
ಮಕ್ಕಳಂತೆ ಸಲುಹಲು । ಚಿಕ್ಕ ಕೂಸಿನಂತೆ ಅದು
ತಕ್ಕಂತೆ ಕಾಯುವ ನೆಲೆಯೆ ॥

ಹಿಂದೂ ಧರ್ಮದಲ್ಲಿ ಆಕಳು ದೈವ ಸಮಾನ. ಅದು ಪೂಜೆಗೊಳ್ಳುತ್ತದೆ. ಕಟುಕನ ಮಚ್ಚಿಗೆ ಬಲಿಯಾಗಬೇಕಿದ್ದ ಹಸುವನ್ನು ಒಬ್ಬ ಭಕ್ತ ಅದರ ಜೀವವನ್ನು ಉಳಿಸುತ್ತಾನೆ. ಮತ್ತೆ ಆ ಕಟುಕ ಕೊಲ್ಲಬಹುದೆಂದು ಅವನ ಕೊಲೆಮಾಡಿಸುತ್ತಾನೆ. ನ್ಯಾಯಾಲಯ ಸಾವುಕಾರನಿಗೆ ಗಲ್ಲು ಶಿಕ್ಷೆ ನೀಡುತ್ತದೆ. ಆದರೆ ಆಕಳ ಮಹಿಮೆಯಿಂದ ಉರುಳು ಬೀಳುವುದಿಲ್ಲ. ಇದೆಲ್ಲ ಅಲ್ಲೇ ಇರುವ ಆಕಳ ಕೃಪೆಯೆಂದು ನೆರೆದ ಜನ ಕೊಂಡಾಡಿದರು. ಕಟುಕರಿಗೆ ಆಕಳನ್ನು ಮಾರಿ ಪಾಪ ಕಟ್ಟಿಕೊಳ್ಳಬೇಡಿರೆಂದು ಕವಿ ರೈತರಲ್ಲಿ ಭಿನ್ನವಿಸಿಕೊಳ್ಳುತ್ತಾನೆ.

ಡಪ್ಪಿನ ನಾದದೊಡನೆ ವಿಜೃಂಭಿಸುವ ಜೀವನ ಸಂಗೀತ ಲಾವಣಿಗಳ ರಾಣಿಯಾಗಿದೆ. ಲಾವಣಿಕಾರ ಸಮಾಜದ ಮಧ್ಯೆ ಹುಟ್ಟಿ ಸಾಮಾಜಿಕ ಅನುಭವಗಳ ರಸಪಾಕವಾಗಿರುತ್ತಾನೆ. ಕವಿಯ ಆಳವಾದ ಜೀವನಾನುಭವ, ಹಾಡುಕಟ್ಟುವ ಚಾತುರ್ಯ ಅವನಿಗೆ ಉನ್ನತ ಸ್ಥಾನವನ್ನು ಒದಗಿಸುತ್ತವೆ. ನಿರಕ್ಷರಿಗಳಾದ ಜನಪದ ಕವಿಗಳ ಕಲ್ಪನಾ ಶಕ್ತಿ, ಅವರ ಭಾವಸಂಪತ್ತು, ರಸಿಕತನ, ಗೇಯಗುಣ, ಲಯ ಪ್ರಾಸಗಳ ಗತ್ತು-ಗಮ್ಮತ್ತು ನಾಟಕೀಯ ಸಂವಾದ ಕೇಳುಗರನ್ನು ಆಕರ್ಷಿಸುತ್ತವೆ. ಅವರು ಛಂದಶ್ಶಾಸ್ತ್ರವನ್ನು ಅಧ್ಯಯನ ಮಾಡದಿದ್ದರೂ

ಅವರಿಗರಿವಿಲ್ಲದೆಯೇ ಅದನ್ನು ಸಾಧಿಸುತ್ತಾರೆ. ಸಾಮಾನ್ಯವಾಗಿ ಇಲ್ಲಿನ ಲಾವಣಿಗಳು ಶೃಂಗಾರಮಯವಾಗಿವೆ. ಸಂದರ್ಭೋಚಿತವಾಗಿ ವೀರ, ಕರುಣ, ಬೀಭತ್ಸ ಹಾಗೂ ಹಾಸ್ಯ ರಸಗಳನ್ನು ಯಥೇಚ್ಛವಾಗಿ ಬಳಸಿ ಪ್ರೇಕ್ಷಕರನ್ನು ರಸಗಂಗೆಯಲ್ಲಿ ಮೀಯಿಸುತ್ತಾರೆ. ಕವಿಯ ಭಾವ ಗಂಭೀರತೆ, ಸಮಾಜ ವಿಡಂಬನೆ, ತೀಕ್ಷ್ಣ ಟೀಕೆ, ತೋಡಿಗೆ ಕೊಡುವ ಚಮತ್ಕಾರಿಕೆ, ವರ್ಣನಾ ಚಾತುರ್ಯ, ಹಾಸ್ಯ ಪ್ರಸಂಗಗಳು ಮೋಡಿಮಾಡುತ್ತವೆ. ಸಾಮಾನ್ಯವಾಗಿ ಬಹಳಷ್ಟು ಲಾವಣಿಗಳು ಆಧ್ಯಾತ್ಮಿಕ ಬೋಧನೆಯಲ್ಲಿ ಕೊನೆಗೊಳ್ಳುತ್ತವೆ.

ನಮ್ಮ ನವಸಾಕ್ಷರ ಯುವಕರು ಪಾಶ್ಚಿಮಾತ್ಯ ಸಂಸ್ಕೃತಿಯತ್ತ ಮುಖ ಮಾಡುತ್ತಿರುವುದರಿಂದ ಗ್ರಾಮೀಣ ಸಂಸ್ಕೃತಿಯನ್ನು ಮರೆಯುತ್ತಿದ್ದಾರೆ. ಜನಪದ ಸಾಹಿತ್ಯ, ಕಲೆ, ಸಂಗೀತ, ಭಾವನೆ, ಸಂಸ್ಕೃತಿಗಳು ಕೆಲವೇ ವರ್ಷಗಳಲ್ಲಿ ಕಣ್ಮರೆಯಾಗಿ ಹೋದರೂ ಅಚ್ಚರಿ ಪಡಬೇಕಿಲ್ಲ. ಜನಪದ ಸಾಹಿತ್ಯದ ಪ್ರಾಮುಖ್ಯತೆಯನ್ನರಿತ ಹಲಸಂಗಿ ಗೆಳೆಯರು ಅದನ್ನು ಸಂಗ್ರಹಿಸಲು ಮುಂದಾದದ್ದು ಒಂದು ಅಭಿನಂದನಾರ್ಹವಾದ ಕಾರ್ಯವೆಂದೇ ತಿಳಿಯಬೇಕು. ಹಳ್ಳಿಯ ಹಾಡುಗಳ ಬಗ್ಗೆ ಒಲವನ್ನು ಬೆಳೆಸಿಕೊಂಡಿದ್ದ ಪಿ. ಧೂಲಾಸಾಹೇಬ ಹಾಗೂ ಸಿಂಪಿ ಲಿಂಗಣ್ಣನವರು 'ಜೀವನ ಸಂಗೀತ' ಸಂಪಾದಿಸಿ ಮಹತ್ತರ ಕೊಡುಗೆ ನೀಡಿದ್ದಾರೆಂದರೆ ಅತಿಶಯೋಕ್ತಿಯೆನಿಸುವುದಿಲ್ಲ.

* * *

ಪಟೇಲ ಧೂಲಾ ಸಾಹೇಬರು ಕನ್ನಡ ನವೋದಯ ಸಾಹಿತ್ಯ ಸಂದರ್ಭದಲ್ಲಿ ಕಾಣಿಸಿಕೊಂಡ ಉತ್ತರ ಕರ್ನಾಟಕದ ಗ್ರಾಮೀಣ ಪ್ರತಿಭೆ. ಬಹುಮುಖ ವ್ಯಕ್ತಿತ್ವದ ಕಾಸೀಮ ಸಾಹೇಬರು ಜೀವಿತದ ಅಲ್ಪಾವಧಿಯಲ್ಲಿ ಸೋಪಜ್ಞತೆಯನ್ನು ಮೆರೆದ ಅಪರೂಪದ ಮುಸ್ಲಿಂ ಚೇತನ. ಕನ್ನಡ ಲಾವಣಿ ಸಂಗ್ರಹಿಸಿ, ಗಾಯಕ, ಪ್ರಚಾರಕರಾಗಿ; ಕವಿ ಕಥೆಗಾರರಾಗಿ; ಸ್ವಾತಂತ್ರ್ಯ ಹೋರಾಟಗಾರರಾಗಿ; ಹಲಸಂಗಿ ಗೆಳೆಯರ ಗುಂಪಿನ ಸಕ್ರಿಯ ಸದಸ್ಯರಾಗಿ; ಹಿಂದೂ ಮುಸ್ಲಿಂ ಸೌಹಾರ್ದ ಸಂಕೇತವಾಗಿ; ಆಜನ್ಮಬ್ರಹ್ಮಚಾರಿಯಾಗಿ; ಕನ್ನಡ ಸಾಹಿತ್ಯ ಸಂಸ್ಕೃತಿ ಹರಿಕಾರರಾಗಿ ಸಲ್ಲಿಸಿದ ಸೇವೆ ಅಮೋಘ.

ಪಿ. ಧೂಲಾ ಸಾಹೇಬರ ಬದುಕು ಬರಹ ಸಾಧನೆಯನ್ನು ಚೆನ್ನಾಗಿ ಬಲ್ಲ ಸಾಹಿತಿ, ಸಮಾಜ ಸೇವಕ ಕಾಸೀಮಸಾಬ ಹುಸೇನಸಾಬ ಬಿಜಾಪುರರು ಆತ್ಮೀಯವಾದ ವ್ಯಕ್ತಿಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು,
ಬೆಂಗಳೂರು